بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّي عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

# ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ವರ್ಷ: 03

ಸಂಚಿಕೆ: 47

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

24 ನವೆಂಬರ್ 2022, 24 ನಬುವ್ವತ್ 1401 ಹಿಜರಿ ಶಮ್ಸಿ,
28 ರಬೀ ಉಸ್ಸಾನಿ 1444 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

رَبَّنَا لَا تُزِغْ قُلُوْبَنَا بَعْدَ اِذْ هَدَيْتَنَا وَهَبْ لَنَا مِنْ لَّدُنْكَ رَحْمَةً ۚ اِنَّكَ اَنْتَ الْوَهَّابُ (آل عمران:9)

(ಆಲಿ ಇಮ್ರಾನ್ : 09)

ಅಂದರೆ: ನಮ್ಮ ಪ್ರಭೂ, ನೀನು ನಮಗೆ ಮಾರ್ಗದರ್ಶನವನ್ನು ಮಾಡಿದ ಬಳಿಕ ನಮ್ಮ ಹೃದಯಗಳಲ್ಲಿ ವಕ್ರಬುದ್ಧಿಯುಂಟಾಗುವಂತೆ ಮಾಡದಿರು. ನೀನು ನಮಗೆ ನಿನ್ನಿಂದ ಕರುಣೆಯನ್ನು ದಯಪಾಲಿಸು. ನಿಸ್ಸಂದೇಹವಾಗಿಯೂ ನೀನೇ ಅತಿದೊಡ್ಡ (ಅನುಗ್ರಹ)ದಾತ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಮಹಿಳೆಯರು ಪ್ರಾಣಿಯನ್ನು ವಧಿಸುವುದು, ಹಾನಿಯಿಂದ ರಕ್ಷಿಸಲು ಪ್ರತಿನಿಧಿಯು ಮಾಲೀಕರ ಸಂಪತ್ತನ್ನು ಉಪಯೋಗಿಸುವುದು**

**(2304)** ಕಅ್‌ಬ್ ಬಿನ್ ಮಾಲಿಕ್(ರ) ವರದಿ ಮಾಡುತ್ತಾರೆ ಅವರು ತಮ್ಮ ತಂದೆಯ ಬಗ್ಗೆ ಹೇಳುತ್ತಾರೆ: ಅವರು 'ಸಲ್‌ಅ' ಪರ್ವತದ ಮೇಲೆ ಮೇಯಲು ಆಡುಗಳನ್ನು ಬಿಟ್ಟಿದ್ದರು. ಅವರ ಸೇವಕಿಯೊಬ್ಬಳು ಆ ಮೇಕೆಯಲ್ಲಿ ಒಂದು ಮೇಕೆ ಸಾಯುತ್ತಿರುವುದನ್ನು ನೋಡಿದಳು. ಕೂಡಲೆ ಅವಳು ಒಂದು ಕಲ್ಲಿನಿಂದ ಆ ಮೇಕೆಯನ್ನು ವಧಿಸಿದಳು. ಹಝ್‌ರತ್ ಕಅ್‌ಬ್(ರ) ಅವರು ತಮ್ಮ ಕುಟುಂಬದವರಿಗೆ ಇದರ ಬಗ್ಗೆ ಹೇಳಿದರು: ನಾನು ರಸೂಲುಲ್ಲಾಹ್(ಸ) ಅವರಲ್ಲಿ ಇದರ ಬಗ್ಗೆ ಕೇಳುವವರೆಗೆ ನಾನು ಈ ಆಹಾರ ಸೇವಿಸುವುದಿಲ್ಲ. ಅಥವಾ (ಹೇಳಿದರು) ನಾನು ಯಾರನ್ನಾದರೂ ಪ್ರವಾದಿ(ಸ) ಅವರ ಬಳಿಗೆ ಕಳುಹಿಸುವವರೆಗೆ ಮತ್ತು ಅವರು ಅದರ ಬಗ್ಗೆ ರಸೂಲುಲ್ಲಾಹ್(ಸ) ಅವರಲ್ಲಿ ಕೇಳುವವರೆಗೆ ಸೇವಿಸುವುದಿಲ್ಲ. ಕೊನೆಗೆ ಪ್ರವಾದಿಯವರಲ್ಲಿ ವಿಚಾರಿಸದಾಗ ರಸೂಲುಲ್ಲಾಹ್(ಸ) ಅವರು ಅದನ್ನು ಸೇವಿಸಲು ಅವಕಾಶ ಮಾಡಿಕೊಟ್ಟರು. ಉಬೈದುಲ್ಲಾ ಹೇಳುತ್ತಿದ್ದರು: ಅವಳು ಗುಲಾಮಳಾಗಿ ಆ ಮೇಕೆಯನ್ನು ವಧಿಸಿದ್ದು ನನಗೆ ಇಷ್ಟವಾಯಿತು.

**(ವ್ಯಾಖ್ಯಾನ)** ಹಝ್‌ರತ್ ಸೈಯದ್ ಝೈನ್ ಅಲ್-ಅಬಿದೀನ್ ವಲಿಯುಲ್ಲಾ ಷಾ ಸಾಹಿಬ್(ರ) ಹೇಳುತ್ತಾರೆ: ಈ ಹದೀಸ್‌ನ ಸಂಬಂಧವು ಹಲಾಲ್ ಮತ್ತು ಹರಾಮ್‌ನ ಬಗ್ಗೆ ಆಗಿರಲಿಲ್ಲ. ಬದಲಿಗೆ ಪ್ರತಿನಿಧಿಗೆ ಸಂಬಂಧಿಸಿತ್ತು. ಸೇವಕಿಯು ಮೇಕೆಯ ಯಜಮಾನನಿಗೆ ಸೇರಿದವಳು ಮತ್ತು ಈ ಅರ್ಥದಲ್ಲಿ ಆ ಮೇಕೆಯ ಹಿಂಡಿನ ರಕ್ಷಣೆಯನ್ನು ಅವಳಿಗೆ ವಹಿಸಲಾಗಿತ್ತು. ಅವಳು ಉತ್ತಮ ವಿವೇಚನೆಯಿಂದ ವರ್ತಿಸಿದಳು ಮತ್ತು ಮೇಕೆ ಸಾಯುವುದನ್ನು ಕಂಡು ಅವಳು ಅದನ್ನು ವಧಿಸಿದಳು. ಆದ್ದರಿಂದ, ಪ್ರತಿನಿಧಿ ಅಥವಾ ರಕ್ಷಕರಿಗೆ ಹಾಗೆ ಮಾಡಲು ಅನುಮತಿಸಲಾಗಿದೆ ಮತ್ತು ಅಸಾಧಾರಣ ಸಂದರ್ಭಗಳಲ್ಲಿ ಹಾನಿಯ ವಿರುದ್ಧ ರಕ್ಷಣಾತ್ಮಕವಾದ ಇಂತಹ ಇತ್ಯರ್ಥವನ್ನು ಮಾಡಲು ಪ್ರತಿನಿಧಿಗೆ ಅಧಿಕಾರವಿದೆ.

**(ಬುಖಾರಿ, ಸಂಪುಟ-4, ಕಿತಾಬ್ ಅಲ್-ವಕಲಾಹ್, 2008 ಖಾದಿಯಾನ್ ಪ್ರಕಟಿತ)**

## ಅರಸರು ಕೂಡ ಈ ಸರಪಳಿಗೆ ಪ್ರವೇಶಿಸಲಿದ್ದಾರೆ ತದನಂತರ ಅವರೊಂದಿಗೆ ಒಂದು ಲೋಕವು ಈ ಕಡೆಗೆ ತಿರುಗುತ್ತದೆ

**ಸಯ್ಯಿದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಜಮಾಅತ್‌ನ ಭವಿಷ್ಯದ ಬಗ್ಗೆ ಒಂದು ದೈವದರ್ಶನ

"ಅರಸರು ಸಹ ಈ ಸರಪಳಿಯನ್ನು ಪ್ರವೇಶಿಸುತ್ತಾರೆ ಎಂದು ನಾನು ಒಂದು ಮಹಾನ್ ದೈವದರ್ಶನದಿಂದ ತಿಳಿದುಕೊಂಡಿದ್ದೇನೆ. ಆ ಅರಸರುಗಳನ್ನು ಸಹ ನನಗೆ ತೋರಿಸಲಾಗಿದೆ. ಅವರು ಕುದುರೆ ಸವಾರಿ ಮಾಡುತ್ತಿದ್ದರು ಮತ್ತು ಸರ್ವಶಕ್ತನಾದ ಅಲ್ಲಾಹನು ನುಡಿದಿದ್ದೇನೆಂದರೆ ನಾನು ನಿಮ್ಮನ್ನು ಎಷ್ಟರ ಮಟ್ಟಿಗೆ ಅನುಗ್ರಹಿಸುತ್ತೇನೆ ಎಂದರೆ ರಾಜರು ನಿಮ್ಮ ಬಟ್ಟೆಗಳಲ್ಲಿ ಅನುಗ್ರಹಗಳನ್ನು ಹುಡುಕುತ್ತಾರೆ.

ಸರ್ವಶಕ್ತನಾದ ಅಲ್ಲಾಹನು ಅಂತಹ ಜನರನ್ನು ನಮ್ಮ ಜಮಾತ್‌ನಲ್ಲಿ ಒಂದು ಕಾಲದ ನಂತರ ಪ್ರವೇಶಿಸುವಂತೆ ಮಾಡುತ್ತಾನೆ ಮತ್ತು ನಂತರ ಅವರೊಂದಿಗೆ ಒಂದು ಜಗತ್ತು ಇದರ ಕಡೆಗೆ ತಿರುಗುತ್ತದೆ."

### ನಿಷ್ಠಾವಂತರ ಸಂಗಾತಿ

**ಖದ್ ಅಫ್ಲಹ ಮನ್ ಝಕ್ಕಾಹ** (ಅಶ್ಶಮ್ಸ್:10) ಎಂದು ಪವಿತ್ರ ಖುರ್‌ಆನ್‌ನಲ್ಲಿ ಉಲ್ಲೇಖಿಸಲಾಗಿದೆ. ಅಂದರೆ ಅದನ್ನು (ಆತ್ಮವನ್ನು) ಪರಿಶುದ್ಧವಾಗಿರಿಸಿದವನು ಖಂಡಿತವಾಗಿಯೂ ಜಯಗಳಿಸಿದವನು. ಆತ್ಮವನ್ನು ಪರಿಶುದ್ಧಗೊಳಿಸುವುದಕ್ಕೆ ನೀತಿವಂತರ ಸಹವಾಸದಲ್ಲಿರುವುದು, ಅದೇ ರೀತಿ ಭಯಭಕ್ತಿವುಳ್ಳವರೊಂದಿಗೆ, ಒಳಿತು ಮಾಡುವವರೊಂದಿಗೆ ಸಂಬಂಧ ಬೆಳೆಸುವುದು ಬಹಳ ಉತ್ತಮವಾಗಿರುತ್ತದೆ. ಸುಳ್ಳು ಮುಂತಾದ ನೀಚ ಗುಣಗಳನ್ನು ದೂರಗೊಳಿಸಬೇಕು. ಮಾರ್ಗದರ್ಶನಕ್ಕಾಗಿ ನೇರದಾರಿಯಲ್ಲಿ ನಡೆಯುವವರನ್ನು ಕೇಳಬೇಕು. ತಮ್ಮ ತಪ್ಪುಗಳನ್ನು ಜೊತೆ ಜೊತೆಯಲ್ಲೇ ಸರಿಪಡಿಸಬೇಕು. ಯಾವ ರೀತಿ ತಪ್ಪುಗಳನ್ನು ಸರಿಪಡಿಸದೆ ಉಕ್ತಲೇಖನವು ಸರಿಯಾಗುವುದಿಲ್ಲವೋ ಅದೇ ರೀತಿ ದೋಷಗಳನ್ನು ಸರಿಪಡಿಸದೆ ನೈತಿಕತೆಯು ಸರಿಯಾಗುವುದಿಲ್ಲ. ಮನುಷ್ಯನು ಎಂತಹ ಜೀವಿಯಾಗಿದ್ದಾನೆ ಎಂದರೆ, ಅವನ ಶುದ್ಧೀಕರಣವನ್ನು ಸಕಾಲದಲ್ಲಿ ಮಾಡಿದರೆ, ಅವನು ನೇರ ಮಾರ್ಗದಲ್ಲಿ ನಡೆಯುತ್ತಾನೆ, ಇಲ್ಲದಿದ್ದರೆ ಅವನು ದಾರಿ ತಪ್ಪುತ್ತಾನೆ."

### ದೇವರ ಭಯ

ಹೇಳಿದರು: "ರಾತ್ರಿ ಹೊತ್ತಲ್ಲಿ ಎಲ್ಲೆಡೆ ಮೌನವಿರುವಾಗ ಮತ್ತು ನಾವು ಒಬ್ಬಂಟಿಯಾಗಿರುವಾಗ, ಆ ಸಮಯದಲ್ಲಿಯೂ ಸಹ, ಅಲ್ಲಾಹನು ಸ್ವಯಂಪೂರ್ಣನಾಗಿದ್ದಾನೆ ಎಂದು ಅಲ್ಲಾಹನ ಸ್ಮರಣೆಯಲ್ಲಿ ಹೃದಯವು ಭಯಪಡುತ್ತದೆ."

### ನಮ್ರಭಾವನೆ

ಹೇಳಿದರು: "ಒಬ್ಬ ವ್ಯಕ್ತಿಯು ಯಶಸ್ಸನ್ನು ಸಾಧಿಸಿದಾಗ ಮತ್ತು ಅಸಹಾಯಕತೆ ಮತ್ತು ಸಂಕಟದ ಸ್ಥಿತಿಯು ಅವನಲ್ಲಿ ಉಳಿದಿಲ್ಲ ಎಂದಾಗ ಆ ಸಮಯದಲ್ಲಿ ನಮ್ರಭಾವವನ್ನು ಆರಿಸಿಕೊಂಡು ಅಲ್ಲಾಹನನ್ನು ಸ್ಮರಿಸುವ ವ್ಯಕ್ತಿ ಪರಿಪೂರ್ಣನಾಗಿರುತ್ತಾನೆ."

**(ಮಲ್‌ಫೂಝಾತ್, ಸಂಪುಟ-1, ಪುಟ-416, ಮುದ್ರಿತ ಖಾದಿಯಾನ್ 2018)**

## ಹಿಂಸಾಚಾರದ ಸಮಯದಲ್ಲಿ ಇಸ್ಲಾಮ್ ಸ್ಪಷ್ಟ ನಿರಾಕರಣೆಯನ್ನು ಅನುಮತಿಸಿದೆ ಎಂದು ಕ್ರೈಸ್ತ ಬರಹಗಾರರು ಬರೆಯುತ್ತಾರೆ ಆ ಹಿಂಸಾಚಾರಗಳಲ್ಲಿ ಒಂದು ಹಿಂಸೆ ಎಂದರೆ ಅದನ್ನು ಕ್ರೈಸ್ತ ಪಾದ್ರಿಗಳು ಇಸ್ಲಾಂ ಧರ್ಮದ ಮೇಲೆ ಮಾಡುತ್ತಾ ಬಂದಿರುವರು

ಹಝ್‌ರತ್ ಮುಸ್ಲಿಹ್ ಮೌಊದ್(ರ) ಸೂರಃ ಅನ್ನಹಲ್ ಆಯತ್ 111 **ಸುಮ್ಮ ಇನ್ನ ರಬ್ಬಿಕ ಲಿಲ್ಲಝೀನ ಹಾಜರೂ ಮಿಮ್ ಬಅ್‌ದಿ ಮಾ ಫುತುನೂ ಸುಮ್ಮ ಜಾಹದೂ ವ ಸಬರೂ; ಇನ್ನ ರಬ್ಬಕ ಮಿಮ್ ಬಅ್‌ದಿಹಾ ಲಗಫೂರುರ್ರಹೀಮ್** ನ ವ್ಯಾಖ್ಯಾನದಲ್ಲಿ ಹೇಳುತ್ತಾರೆ:

ಈ ಆಯತ್‌ನಲ್ಲಿ, ಮುಂಚೆ **ಇಲ್ಲಾ ಮನ್ ಉಕ್ರಿಹ ವ ಖಲ್‌ಬುಹೂ ಮುತ್‌ಮಿನ್ನುನ್ ಬಿಲ್ ಈಮಾನ್** ನ ಪದಗಳಿಂದ ವಿನಾಯಿತಿ ಪಡೆದ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوْلُ اللّٰہِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوْمَ لَشَرُّ مَا فِی الْعَالَمِ ✡ شَرَّ السُّمُوْمِ عَدَاوَۃُ الصُّلَحَاءِ

**ಜಲ್ಸ ಸಾಲಾನದ ಭಾಗವಹಿಸುವಿಕೆಗೆ ಮಹತ್ವ ನೀಡಿ: ಇಲ್ಲಿ ನಡೆಯುವಂತಹ ಎಲ್ಲಾ ಕಾರ್ಯಗಳು ದೇವ ಸಮ್ಮತಿ ಹೊಂದಿವೆ ಮತ್ತು ಇಸ್ಲಾಮಿನ ಮಹೋನ್ನತ ಸ್ಥಾನವನನು ಪ್ರದರ್ಶಿಸುವುದಾಗಿದೆ. ಈ ಸಂಘಟನೆಯ ಬುನಾದಿಯು ಅಲ್ಲಾಹನು ಸ್ವತಃ ತನ್ನ ಕೈಯಿಂದ ಇಟ್ಟಿರುವನು.**

ಸಯ್ಯದ್‌ನಾ ಹಝ್ರತ್ ಮಾಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಜಲ್ಸ ಸಾಲಾನದ ಅಡಿಪಾಯವನ್ನು ವಿಶೇಷವಾಗಿ ಸರ್ವಶಕ್ತನಾದ ಅಲ್ಲಾಹನ  ಆದೇಶ ಮತ್ತು ಅವನ ಉದ್ದೇಶದಿಂದ ಸ್ಥಾಪಿಸಿದರು. ಜಲ್ಸ ಸಾಲಾನದ ವೈಭವಯುತ ಪ್ರಯೋಜನಗಳನ್ನು ಹಝ್ರತ್ ಮಸೀಹ್ ಮೌಊದ್(ಅ) ರವರು ವಿವರಿಸಿದ್ದಾರೆ. ಇದರಿಂದ ಪ್ರತಿಯೊಬ್ಬ ಮನುಷ್ಯನಿಗೆ ವೈಯುಕ್ತಿಕವಾಗಿ ಹಾಗೂ ಆಧ್ಯಾತ್ಮಿಕವಾಗಿ ಪ್ರಯೋಜನವಾಗುತ್ತದೆ. ಅದರೊಂದಿಗೆ ಸಮಯೋಚಿತವಾಗಿ ಇಡೀ ಸಮುದಾಯವು ಆಧ್ಯಾತ್ಮಿಕತೆ, ಅಲ್ಲಾಹ್ ಮತ್ತು ಅವನ ರಸೂಲ್(ಸ) ಅವರ ಬಗ್ಗೆ ಪರಸ್ಪರ ಪ್ರೀತಿ ಮತ್ತು ಇಸ್ಲಾಂ ಧರ್ಮದ ತ್ಯಾಗದಲ್ಲಿ ಅಭಿವೃದ್ಧಿ ಹೊಂದಿ ಮುಂದುವರಿಯುತ್ತದೆ. ಈಗ ನಾವು ಜಲ್ಸ ಸಲಾನದ ದೊಡ್ಡ ಪ್ರಯೋಜನಗಳನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪದಗಳಲ್ಲಿ ಈ ಕೆಳಗಿನ ಸಾಲುಗಳಲ್ಲಿ ಪಟ್ಟಿ ಮಾಡುತ್ತೇವೆ. ಇಲ್ಲಿ ನಾವು ಮೊದಲು ಜಲ್ಸ ಸಾಲಾನದ ವಿಶ್ವಾಸವರ್ಧಕ ಹಿನ್ನೆಲೆಯನ್ನು ಸಂಕ್ಷಿಪ್ತವಾಗಿ ವಿವರಿಸುತ್ತೇವೆ.

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ತಾನು ಮಸೀಹ್ ಮೌಊದ್ (ವಾಗ್ದಾತ್ತ ಮಸೀಹ್) ಎಂದು ದಾವೆ ಮಾಡಿದಾಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲ್ವಿ ಹಝ್ರತ್ ಮಸೀಹ್ ಮೌಊದ್[ಅ] ಅವರ ಮೇಲೆ ಕೋಪಗೊಂಡು ತನ್ನ ಶಿಕ್ಷಕ ಮೌಲ್ವಿ ನಜೀರ್ ಹುಸೇನ್ ದೆಹಲ್ವಿಯ ಬಳಿ ಕುಫರ್‌ನ (ಅಪನಂಬಿಕೆಯ) ಫತ್ವಾವನ್ನು ವಿಧಿಸಲು ಹೋದನು. ಮೌಲ್ವಿ ನಜೀರ್ ಹುಸೇನ್ ದೆಹಲ್ವಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಮೇಲೆ ಕುಫರ್ (ಅಪನಂಬಿಕೆಯ) ಫತ್ವಾವನ್ನು ಹೇರುವ ಮೂಲಕ ಇಡೀ ದೇಶದಲ್ಲಿ ಉಗ್ರ ಪ್ರಚೋದನೆಯ ಬೆಂಕಿಯನ್ನು ಹೊತ್ತಿಸಿದರು. ಅವರ ನಂಬಿಕೆಯ ಪ್ರಕಾರ ಬನೀ ಇಸ್ರಾಈಲ್‌ನ ಪ್ರವಾದಿ ಈಸಾ ಮಸೀಹರು ಆಕಾಶದಲ್ಲಿ ಜೀವಂತವಾಗಿದ್ದಾರೆ ಮತ್ತು ಅವರು ಆಕಾಶದಿಂದ ಇಳಿಯುತ್ತಾರೆ, ಆದ್ದರಿಂದ ಉಮ್ಮತೆ ಮುಹಮ್ಮದಿಯಾದಿಂದ ಯಾರೋ ಮೆಸ್ಸಿಹ್ ಎಂದು ಹೇಳುವುದು ಕುಫರ್ ಆಗಿರುತ್ತದೆ. ಸತ್ಯ ಮತ್ತು ಸುಳ್ಳನ್ನು ನಿರ್ಧರಿಸಲು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ದೆಹಲಿಗೆ ಅಹ್ಲೆ ಹದೀಸ್‌ನ ಶ್ರೇಷ್ಠ ವಿದ್ವಾಂಸ ಎಂದು ಕರೆಯಲ್ಪಡುವ ಮಿಯಾಂ ಮೌಲ್ವಿ ನಝೀರ್ ಹುಸೈನ್ ದೆಹಲ್ವಿ ಅವರೊಂದಿಗೆ 'ಹಯಾತೆ ಮಸೀಹ್' ಮತ್ತು 'ವಫಾತೆ ಮಸೀಹ್' (ಈಸ ಮಸೀಹ್ ಜೀವನ ಮತ್ತು ಮರಣದ) ಬಗ್ಗೆ ಚರ್ಚಿಸಲು ಮತ್ತು ಈ ಮೂಲಕ ಜನರಿಗೆ ಸತ್ಯವನ್ನು ತಿಳಿದುಕೊಳ್ಳಲು ಅವಕಾಶ ದೊರೆಯುವುದು ಎಂದು ದೆಹಲಿಗೆ ಪ್ರಯಾಣಿಸಿದರು. ಆದರೆ ಮೌಲ್ವಿ ನಝೀರ್ ಹುಸೇನ್ ದೆಹಲ್ವಿ ಯಾವುದೇ ರೀತಿಯಲ್ಲಿ ಚರ್ಚೆಗೆ ಒಪ್ಪಲಿಲ್ಲ ಮತ್ತು ತಪ್ಪಿಸಿಕೊಳ್ಳುವ ಮಾರ್ಗವನ್ನು ಹಿಡಿದರು. ರುಹಾನಿ ಖಾಝಾಈನ್ ಸಂಪುಟ–4 ರ ಆರಂಭದಲ್ಲಿ ಅದರ ಕುತೂಹಲಕಾರಿ ವಿವರಣೆಯನ್ನು ನೋಡಿ.

ಮೌಲ್ವಿ ನಝೀರ್ ಹುಸೇನ್ ದೆಹಲ್ವಿಯವರು "ಈ ವ್ಯಕ್ತಿಯು ಕಾಫಿರ್ ಆಗಿದ್ದಾನೆ, ಕಾಫಿರ್‌ನೊಂದಿಗೆ ಚರ್ಚೆ ಸಾಧ್ಯವಿಲ್ಲ" ಎಂದು ಹೇಳುವ ಮೂಲಕ ಚರ್ಚೆಯನ್ನು ತಪ್ಪಿಸುವ ತಂತ್ರವನ್ನು ಹೂಡಿದನು. ದೆಹಲಿಯಿಂದ ಹಿಂದಿರುಗಿದ ನಂತರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ರವರು "ಆಸ್ಮಾನಿ ಫೈಸ್ಲ" ಎಂಬ ಪುಸ್ತಕವನ್ನು ಬರೆದರು ಅದರಲ್ಲಿ ಮೌಲ್ವಿ ನಝೀರ್ ಹುಸೇನ್ ಅವರನ್ನು ಸ್ವರ್ಗೀಯ ನಿರ್ಧಾರದೊಂದಿಗೆ ಸ್ಪರ್ಧಿಸಲು ಆಹ್ವಾನಿಸಿದರು. ಪವಿತ್ರ ಖುರ್‌ಆನ್‌ನಲ್ಲಿ ಧರ್ಮನಿಷ್ಠೆ ಮತ್ತು ವಿಶ್ವಾಸಿಗಳ ನಾಲ್ಕು ಚಿಹ್ನೆಗಳನ್ನು ವಿವರಿಸಲಾಗಿದೆ ಎಂದು ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು. ಮೌಲ್ವಿ ನಝೀರ್ ಹುಸೇನ್ ಅವರು ಈ ನಾಲ್ಕು ಚಿಹ್ನೆಗಳಲ್ಲಿ ನನ್ನೊಂದಿಗೆ ಚರ್ಚಿಸಬೇಕು ಒಂದುವೇಳೆ ನಾನು ಅವಿಶ್ವಾಸಿ, ನಝೀರ್ ಹುಸೇನ್ ವಿಶ್ವಾಸಿಯಾಗಿದ್ದರೆ, ಸರ್ವಶಕ್ತನಾದ ಅಲ್ಲಾಹನ ಬೆಂಬಲವು ನನ್ನೊಂದಿಗೆ ಇರುವುದಿಲ್ಲ, ಅದು ನಝೀರ್ ಹುಸೇನ್ ಅವರೊಂದಿಗೆ ಇರುತ್ತದೆ.

ವಿಶ್ವಾಸಿಗಳ ಆ ನಾಲ್ಕು ಚಿಹ್ನೆಗಳು ಹೀಗಿವೆ: **ಮೊದಲನೆಯದಾಗಿ,** ಪರಿಪೂರ್ಣ ಮೂಮಿನ್‌ಗೆ ಸರ್ವಶಕ್ತನಾದ ಅಲ್ಲಾಹನಿಂದ ಆಗಾಗ್ಗೆ ಶುಭವಾರ್ತೆ ದೊರೆಯುತ್ತದೆ, ಅಂದರೆ, ಅವನ ಇಚ್ಚೆಗಳು, ಅವನ ಸ್ನೇಹಿತರ ಅಗತ್ಯಗಳಂತಹ ಶುಭವಾರ್ತೆಗಳು ಸಂಭವಿಸುವ ಮೊದಲು ಅವನಿಗೆ ತಿಳಿಸಲಾಗುತ್ತದೆ.

**ಎರಡನೇಯದಾಗಿ** ಪರಿಪೂರ್ಣ ಮೂಮಿನ್‌ಗೆ ಸಂಬಂಧಿಸಿದ ಅಥವಾ ಅವನ ಸಂಬಂಧಿಕರಿಗೆ ಸಂಬಂಧಿಸಿದ ಅದೃಶ್ಯ ಸುದ್ಧಿಯನ್ನು ತಿಳಿಸಲಾಗುತ್ತದೆ.  ಹಾಗೂ ಜಗತ್ತಿನಲ್ಲಿ ಏನು ಬಹಿರಂಗಗೊಳ್ಳಲಿದೆ ಅಥವಾ ಪ್ರಪಂಚದ ಕೆಲವು ಪ್ರಸಿದ್ಧ ವ್ಯಕ್ತಿಗಳಿಗೆ ಸಂಭಂದಿಸಿ ಆಗಲಿರುವ ಕೆಲವು ಬದಲಾವಣೆಗಳ ಬಗ್ಗೆ ಸಾಮಾನ್ಯವಾಗಿ ಮುಮಿನ್‌ಗೆ ಆಗಾಗ್ಗೆ ತಿಳಿಸಲ್ಪಡುತ್ತದೆ.

**ಮೂರನೇಯದಾಗಿ** ಪರಿಪೂರ್ಣ ಮುಮಿನ್‌ನ ಹೆಚ್ಚಿನ ದುಆಗಳನ್ನು ಸ್ವೀಕರಿಸಲಾಗುತ್ತದೆ ಮತ್ತು ಆಗಾಗ್ಗೆ ಈ ದುಆಗಳ ಸ್ವೀಕಾರವನ್ನು ಸಹ ಮುಂಚಿತವಾಗಿ ತಿಳಿಸಲಾಗುತ್ತದೆ.

**ನಾಲ್ಕನೆಯದಾಗಿ,** ಪವಿತ್ರ ಖುರ್‌ಆನ್‌ನ ವಿವರಗಳು, ಆಧುನಿಕ ಬೋಧನೆಗಳು, ಹಾಸ್ಯಗಳು ಮತ್ತು ವಿಚಿತ್ರ ಗುಣ ಲಕ್ಷಣಗಳ ಪರಿಪೂರ್ಣ ವಿವರ ಮೂಮಿನ್‌ಗೆ ಬಹಿರಂಗಗೊಳ್ಳುತ್ತವೆ. (ಆಸ್ಮಾನಿ ಫೈಸ್ಲ, ರೂಹಾನಿ ಖಝಾಈನ್, ಸಂಪುಟ–4, ಪುಟ–323)

ಗೆಲುವು ಮತ್ತು ಸೋಲಿನ ನಿರ್ಧಾರ ಹೇಗಾಗಬೇಕು ಎಂಬುದರ ಬಗ್ಗೆ ಅವರು ಹೀಗೆ ಬರೆದಿದ್ದಾರೆ: **"ಪಂಜಾಬ್‌ನ ರಾಜಧಾನಿಯಾದ ಲಾಹೋರ್‌ನಲ್ಲಿ ಈ ಪರೀಕ್ಷೆಯ ಉದ್ದೇಶಕ್ಕಾಗಿ ಒಂದು ಸಮಿತಿನ್ನು (ಅಂಜುಮನ್) ನೇಮಿಸುವುದು ಸ್ಪರ್ಧೆಯ ಅತ್ಯುತ್ತಮ ವ್ಯವಸ್ಥೆಯಾಗಿರುತ್ತದೆ.** ಎದುರಾಳಿ ಪಕ್ಷವು ಈ ಪ್ರಸ್ತಾಪವನ್ನು ಒಪ್ಪಿಕೊಂಡರೆ, ನಂತರ ಸಮಿತಿಯ ಸದಸ್ಯರನ್ನು ಎರಡೂ ಪಕ್ಷಗಳು ಸೇರಿ ನೇಮಕ ಮಾಡಲಾಗುವುದು ಮತ್ತು ಭಿನ್ನಾಭಿಪ್ರಾಯವಿದ್ದಲ್ಲಿ ಬಹುಮತದ ಅಭಿಪ್ರಾಯವನ್ನು ಪರಿಗಣಿಸಲಾಗುವುದು ಹಾಗೂ ನಾಲ್ಕು ಚಿಹ್ನೆಗಳನ್ನು ಸಂಪೂರ್ಣವಾಗಿ ಪ್ರಯೋಗಿಸಲು ಎರಡೂ ಪಕ್ಷಗಳು ತಮ್ಮ ಬರಹಗಳನ್ನು ಒಂದು ವರ್ಷದವರೆಗೆ ಸಮಿತಿಗೆ ಕಳುಹಿಸುವುದನ್ನು ಮುಂದುವರಿಸುವುದು ಸೂಕ್ತವಾಗಿರುತ್ತದೆ. ಆ ಸ್ವೀಕರಿಸಿದ ಲೇಖನಗಳ ರಸೀದಿಗಳನ್ನು ಪಕ್ಷಗಳಿಗೆ ಕಳುಹಿಸಲಾಗುತ್ತದೆ. **ಮೊದಲ ಚಿಹ್ನೆ** ಅಂದರೆ, ಶುಭವಾರ್ತೆಯನ್ನು ಪರೀಕ್ಷಿಸುವ ವಿಧಾನವೆಂದರೆ, ಎರಡೂ ಪಕ್ಷಗಳೆಡೆ ಅಲ್ಲಾಹನ ಕಡೆಯಿಂದ ದೈವವಾಣಿ, ದೈವದರ್ಶನ ಇತ್ಯಾದಿಗಳು ಸಂಭವಿಸಿದರೆ ಅದನ್ನು ದಿನಾಂಕದೊಂದಿಗೆ ಮುಸ್ಲಿಮರ ನಾಲ್ಕು ಸಾಕ್ಷಿಗಳೊಂದಿಗೆ ಮೊದಲು ಸಮಿತಿಯ ಸಮ್ಮುಖ ಕಳುಹಿಸಬೇಕು ಮತ್ತು ಸಮಿತಿಯು ಅದರ ದಾಖಲೆಗಳನ್ನು ದಿನಾಂಕದೊಂದಿಗೆ ತಮ್ಮ ರೆಜಿಸ್ಟರ್‌ನಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಅದನ್ನು ಸಮಿತಿಯ ಎಲ್ಲಾ ಸದಸ್ಯರು ಅಥವಾ ಕನಿಷ್ಠ ಐದು ಸದಸ್ಯರು ಸಹಿ ಮಾಡಿದ ನಂತರ ಪಕ್ಷಕ್ಕೆ ನಿರ್ದಿಷ್ಟಪಡಿಸಿದಂತೆ ರಸೀದಿಯನ್ನು ಕಳುಹಿಸಬೇಕು ಮತ್ತು ಈ ಶುಭವಾರ್ತೆಯನ್ನು ಸತ್ಯವೊ ಅಥವಾ ಸುಳ್ಳೊ ಎಂಬುದನ್ನು ಪರೀಕ್ಷಿಸಬೇಕು ನಂತರ ಈ ಶುಭ ಸುದ್ದಿಯ ಯಾವುದೇ ಫಲಿತಾಂಶ ಕಾಣಿಸಿಕೊಳ್ಳುವ ಸಮಯದಲ್ಲಿ, ಅದರ ಸ್ಮರಣೆಯನ್ನು ಅದರ ಸಾಕ್ಷ್ಯದ ರಿಜಿಸ್ಟರ್‌ನಲ್ಲಿ ಬರೆಯಬೇಕು ಮತ್ತು ಸದಸ್ಯರ ಸಾಕ್ಷ್ಯಗಳನ್ನು ಅದರ ಮೇಲೆ ದಾಖಲಿಸಬೇಕು." (ಸಹ ಪು. 325)

ಹೀಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ನಾಲ್ಕು ಚಿಹ್ನೆಗಳ ಬಗ್ಗೆ ಮತ್ತು ಅವುಗಳಲ್ಲಿ ಸ್ಪರ್ಧೆಯ ವಿಧಾನದ ಬಗ್ಗೆ ವಿವರವಾಗಿ ವಿವರಿಸಿದರು. ಮೇಲೆ ತಿಳಿಸಿದ ಸಮಿತಿಯ ರಚನೆಯನ್ನು ಪರಿಗಣಿಸಲು ಡಿಸೆಂಬರ್ 27 ರಂದು ಖಾದಿಯಾನ್ ತಲುಪಲು ಅವರು ಜಮಾಅತ್‌ನ ಸ್ನೇಹಿತರಿಗೆ ಸೂಚಿಸಿದರು. ಆದ್ದರಿಂದ, ಈ ದಿನಾಂಕದಂದು, ಸ್ನೇಹಿತರು ಮಸ್ಜಿದ್ ಅಕ್ಸಾದಲ್ಲಿ ಒಟ್ಟುಗೂಡಿದರು. ಮಧ್ಯಾಹ್ನದ ನಮಾಝ್ ಝುಹರ್‌ನ ನಂತರ ಜಮಾಅತ್ತಿನ  ಕಲಾಪ ಆರಂಭವಾಯಿತು. ಮೊದಲನೆಯದಾಗಿ, ಮೌಲಾನಾ ಅಬ್ದುಲ್ ಕರೀಂ ಸಾಹಿಬ್ ಸಿಯಾಲ್‌ಕೋಟಿ(ರ) ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಇತ್ತೀಚಿಗೆ ರಚಿಸಿದ (ಆಸ್ಮಾನಿ ಫೈಸ್ಲ) ಕೃತಿಯನ್ನು ಪಠಿಸಿದರು. ಆಗ....... ಈ ಪತ್ರಿಕೆಯನ್ನು ಈಗಲೇ ಪ್ರಕಟಿಸಬೇಕು ಮತ್ತು ವಿರೋಧಿಗಳ

*(ಪುಟ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

ಒಟ್ಟಾರೆ ನೋಡುವುದಾದರೆ ಅಲ್ಲಾಹನು ಈ ಪರ್ಯಟನೆಯನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಿದನು. ಅಲ್ಲಾಹನು ಮುಂದೆಯೂ ಸದಾ ಅನುಗ್ರಹಿಸಲಿ.

ಮಸೀದಿಗಳೊಂದಿಗೆ ಈ ಸಂಬಂಧ ಮತ್ತು ಆರಾಧನೆಗಳ ಬಗ್ಗೆಯಿರುವ ಚಿಂತೆ ಸದಾ ಉಂಟಾಗುವಂತೆ ಅಲ್ಲಾಹನು ಮಾಡಲಿ. ಈ ಪ್ರಾಮಾಣಿಕತೆ ಮತ್ತು ನಿಷ್ಠೆಯ ದೃಶ್ಯಗಳನ್ನು ಅಲ್ಲಾಹನು ಸದಾ ಅಮೇರಿಕ ಜಮಾಅತಿನ ವ್ಯಕ್ತಿಗಳಲ್ಲಿ ನೆಲೆನಿಲ್ಲಿಸಲಿ ಮತ್ತು ಮಸೀದಿಗಳು ಕೂಡ ಇದೇ ರೀತಿಯಲ್ಲಿ ಜನನಿಬಿಡವಾಗಿರಲಿ. ಈ ಆರಾಧನಾಲಯವು ನಮ್ಮ ಗತಕಾಲ ಮತ್ತು ಭವಿಷ್ಯದ ನಡುವೆ ಒಂದು ಸೇತುವೆಯಂತೆ ಆಗಲಿ ಎಂಬುದು ನನ್ನ ಪ್ರಾರ್ಥನೆ ಮತ್ತು ನನ್ನ ಬಯಕೆಯಾಗಿದೆ. (ಝಿಯಾನ್‌ನ ಮೇಯರ್)

ಇಂದು ಈ ಪಟ್ಟಣವು ವಿವಿಧ ಧರ್ಮಾವಲಂಬಿಗಳ ಮನೆಯಾಗಿದೆ. ಇದು ಸತ್ಯವಿಶ್ವಾಸಿಗಳ ದುಆ ಸ್ವೀಕಾರದ ಒಂದು ಚಿಹ್ನೆಯಾಗಿದೆ...........
ಈ ಮಸೀದಿಯು ಈ ಪಟ್ಟಣಕ್ಕೆ ಮಾತ್ರವಲ್ಲ, ಬದಲಾಗಿ ಎಲ್ಲ ಕಡೆಗಳಿಗೂ ಪ್ರತೀಕ್ಷೆಯ ಒಂದು ಕಿರಣವಾಗಲಿ ಎಂದು ನಾನು ಮನಸ್ಸಾರೆ ಆಶಿಸುತ್ತೇನೆ. (ಮೆಂಬರ್ ಆಫ್ ಇಲ್ಲಿನೋಯ್ಸ್ ಜನರಲ್ ಅಸೆಂಬ್ಲಿ ಆನ್ರೇಬಲ್ ಜೋಯಿಸ್ ಮೇಸನ್)

ಜಮಾಅತಿನ ಇಮಾಮರ ಮಾತು ತನ್ನೊಳಗೆ ಒಂದು ಆಕರ್ಷಣೆಯನ್ನು ಹೊಂದಿದೆ. ವಿಶೇಷವಾಗಿ ಮಾನವೀಯ ಹಕ್ಕುಗಳು ಮತ್ತು ಮಾನವನ ಸೇವೆಗಾಗಿ ಪ್ರಯತ್ನಗಳು ಬಹಳ ಪ್ರಭಾವಶಾಲಿಯಾಗಿವೆ. ಪ್ರೀತಿ ಎಲ್ಲರೊಂದಿಗೂ, ಯಾರೊಂದಿಗೂ ಹಗೆಯಿಲ್ಲವೆಂಬ ನಿಮ್ಮ ಆದರ್ಶ ಸೂತ್ರವಾಕ್ಯ ಎಲ್ಲ ಸಮುದಾಯಗಳಲ್ಲಿ, ಎಲ್ಲ ಧರ್ಮಗಳಲ್ಲಿ ಮತ್ತು ವಿಶೇಷವಾಗಿ ಪೂರ್ತಿ ಝಿಯಾಯಿನ್ ನಗರದಲ್ಲಿ ಪ್ರತಿಧ್ವನಿಸುತ್ತಿದೆ. ಈ ಸಂದೇಶದ ತೀವ್ರ ಆವಶ್ಯಕತೆಯಿದೆ. (ಪ್ರಾದೇಶಿಕ ಶಾಲೆಯ ಒಬ್ಬ ಪ್ರಾಂಶುಪಾಲರಾದ ಝೀಕ್ ಲೇವಂಗ್)

ಸಮಾಜದಲ್ಲಿ ಹಗೆಯಿರಿಸುವವನಿಗೆ ಯಾವುದೇ ಸ್ಥಾನವಿಲ್ಲವೆಂಬ ಸಂದೇಶ ಬಹಳ ಶ್ರೇಷ್ಠವಾದುದಾಗಿದೆ. ನಿಮ್ಮನ್ನು ನೋಡುವುದು, ನಿಮ್ಮ ಮಾತನ್ನು ಆಲಿಸುವುದು ಬಹಳ ವಿಶೇಷವಾದ ಅನುಭವವಾಗಿದೆ. ನಮ್ಮ ಬಳಿಯಲ್ಲಿರುವುದು ದುಆದ ಆಯುಧವಾಗಿದೆ ಎಂಬ ಅಹ್ಮದಿಯಾ ನೇತಾರರ ಮಾತು ನನಗೆ ಬಹಳ ಇಷ್ಟವಾಯಿತು. (ಅತಿಥಿಯೋರ್ವರ ಅನಿಸಿಕೆ)

ಇಂದು ಒಂದು ಸುಂದರವಾದ ದಿನವಾಗಿದೆ. ನನಗೆ ಕಳೆದ ವರ್ಷ ಈ ಮಸೀದಿಯ ಬುನಾದಿ ಹಾಕಲಾಗುವಾಗ ಭಾಗಿಯಾಗಲು ಅವಕಾಶ ಲಭಿಸಿತ್ತು. ನಾನು ಅದರ ನಿರ್ಮಾಣವಾಗಿದ್ದಾಗಿ ನೋಡುತ್ತಿದ್ದೇನೆ. ನಿಮ್ಮ ಮಸೀದಿ ನಮ್ಮ ಸಮುದಾಯಕ್ಕೆ ಪ್ರತೀಕ್ಷೆ ಮತ್ತು ಗೆಳೆತನದ ಮಾರ್ಗವಾಗಿದೆ. (ಅತಿಥಿ ಮಹಿಳೆ)

ನಿಮ್ಮ ಜಮಾಅತಿನ ತತ್ವಗಳು ಬಹಳ ಉನ್ನತ ಮಟ್ಟದ್ದಾಗಿದೆ. ನೀವು ಝಿಯಾಇನಿನ ಪಟ್ಟಣದಲ್ಲಿ ಹೆಜ್ಜೆ ಹಾಕುವಾಗ ಒಂದು ಹಳೆಯ ಕಟ್ಟಡದಲ್ಲಿ "ಪ್ರೀತಿ ಎಲ್ಲರೊಡನೆ, ಯಾರೊಡನೆಯೂ ಹಗೆಯಿಲ್ಲ" ಎಂಬ ಸಂದೇಶ ಕಾಣಬಹುದಾಗಿದೆ ಮತ್ತು ಅದರ ಪ್ರತಿಧ್ವನಿ ನಿಮ್ಮ ಜೊತೆಗೆ ಇರುತ್ತದೆ. ಇದೇ ಝಿಯಾಯಿನ್ ಪಟ್ಟಣದ ನಿಜವಾದ ಚೈತನ್ಯವಾಗಿದೆ.

ಈ ಪಟ್ಟಣದ ನಿರ್ಗತಿಕರನ್ನು ಸಹಾಯ ಮಾಡುವ ಅಹ್ಮದಿಯಾ ಜಮಾಅತಿನ ಸೇವೆಗಳನ್ನು ನಾವು ಪ್ರಶಂಸಿಸುತ್ತೇವೆ. ಶಾಂತಿಪ್ರಿಯ ಮತ್ತು ಮನುಕುಲದ ಸೇವೆ ಮಾಡುವ ಕಮ್ಯೂನಿಟಿಯು ಇಲ್ಲಿ ಮಸೀದಿಯನ್ನು ನಿರ್ಮಿಸಿದೆ ಎಂಬುದು ಈ ಪಟ್ಟಣದ ಸೌಭಾಗ್ಯವಾಗಿದೆ. ಈ ಮಸೀದಿಯು ಈ ಪಟ್ಟಣ ಮತ್ತು ಈ ಪ್ರದೇಶಗಳಿಗೆ ಆಶಾಕಿರಣವಾಗಲಿ ಎಂದು ನಾನು ಬಯಸುತ್ತೇನೆ. (ಎಲನ್ ಪಟ್ಟಣದ ಮೇಯರ್ ಸಾಹಿಬ್‌ರವರ ಪ್ರತಿನಿಧಿ)

ಖ಼ಲೀಫರನ್ನು ನೋಡಿ, ಅವರ ಮಾತುಗಳನ್ನು ಕೇಳಿ ಬಹಳ ನೆಮ್ಮದಿ ಲಭಿಸಿದೆ. ಜಾಗತಿಕ ಶಾಂತಿಗಾಗಿ ಈ ರೀತಿಯಾಗಿ ಪ್ರಯತ್ನ ಮಾಡುವ ಯಾರನ್ನೂ ನಾನು ಕಂಡಿಲ್ಲ. ಬಹಳ ಉತ್ತಮ ಅನುಭವವಾಗಿತ್ತು. ಜನರು ಸ್ವಾರ್ಥಕ್ಕೆ ಬದಲಾಗಿ, ಇನ್ನೊಬ್ಬರ ಮೇಲೆ ಮೇಲುಗೈ ಸಾಧಿಸುವುದಕ್ಕೆ ಬದಲಾಗಿ, ಇತರರ ಪ್ರದೇಶಗಳನ್ನು ವಶಪಡಿಸಲು ಅಥವಾ ದೌರ್ಜನ್ಯ ಮಾಡುವ ಅಜೆಂಡ ಮಾಡುವುದಕ್ಕೆ ಬದಲಾಗಿ ಈ ಸಂದೇಶವನ್ನು ಆಲಿಸಿದರೆ, ಲೋಕದಲ್ಲಿ ಶಾಂತಿ ಸ್ಥಾಪನೆಯಾಗುವುದು. ಶಾಂತಿಯನ್ನು ಬೆಂಬಲಿಸುವ ಇನ್ನಷ್ಟು ಭಾಷಣಗಳನ್ನು ನಮಗೆ ಆಲಿಸಲು ಸಾಧ್ಯವಾದರೆ ಎಷ್ಟು ಚೆನ್ನ. (ಅತಿಥಿಯೋರ್ವರು)

**ಅಹ್ಮದೀಯರು ಮತ್ತು ಇತರ ಸ್ನೇಹಿತರ ಮೇಲೆ ಇತ್ತೀಚಿನ ಅಮೇರಿಕಾ ಪ್ರವಾಸದ ಪರಿಣಾಮಗಳು, ಅಹ್ಮದೀಯೇತರ ಅನಿಸಿಕೆಗಳು ಮತ್ತು ಪ್ರವಾಸದ ಪರಿಣಾಮವಾಗಿ ಬಹಿರಂಗಪಡಿಸಿದ ಹಲವಾರು ದೈವಿಕ ಅನುಗ್ರಹಗಳ ಈಮಾನ್ ವರ್ಧಕ ಉಲ್ಲೇಖಗಳ ಪ್ರಸ್ತಾವನೆ**

**US ಮತ್ತು ಅಂತರಾಷ್ಟ್ರೀಯ ಮಾಧ್ಯಮಗಳಲ್ಲಿ ಪ್ರವಾಸಕ್ಕೆ ವ್ಯಾಪಕ ಪ್ರಚಾರ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಟಿಲ್‌ಫೋರ್ಡ್, ಯು.ಕೆ, ಇಸ್ಲಾಮಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **21–10–2022** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُولُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಕಳೆದ ದಿನಗಳಲ್ಲಿ ನಾನು ಅಮೇರಿಕದ ಕೆಲವು ಜಮಾಅತುಗಳಿಗೆ ಭೇಟಿ ನೀಡಿದ್ದೆ. ನಿಮಗೆ ಗೊತ್ತಿರುವಂತೆ ಎಂ.ಟಿ.ಎ. ಮತ್ತು ಜಮಾಅತಿನ ಇತರ ಇಲೆಕ್ಟ್ರೋನಿಕ್ ಮೀಡಿಯದ ಮೂಲಕ ಈ ಎಲ್ಲ ವಾರ್ತೆಗಳು ಪ್ರಸಾರವಾಗುತ್ತಿದ್ದುವು. ಈ ಪ್ರವಾಸ ಅಲ್ಲಾಹನ ಅನುಗ್ರಹದಿಂದ ಅತ್ಯುತ್ತಮವಾಗಿ ಪೂರ್ತಿಗೊಂಡಿದೆ. ಇತರ ಚ್ಯಾನೆಲ್‌ಗಳೂ ಸಾಕಷ್ಟು ಕವರೇಜ್ ನೀಡುತ್ತಿದ್ದುವು.

ಎಲ್ಲ ರೀತಿಯಲ್ಲೂ ಅಲ್ಲಾಹನ ಅನುಗ್ರಹಗಳ ದೃಶ್ಯಗಳು ಕಾಣುವಂತಾಯಿತು.

ಇದರಿಂದ ನಮ್ಮವರ ಮತ್ತು ಅನ್ಯರ ಮೇಲೆ ಬಹಳ ಧನಾತ್ಮಕ ಪ್ರಭಾವಗಳು ಉಂಟಾದುವು. ಒಬ್ಬ ಯುವಕ ತನ್ನೊಬ್ಬ ಗೆಳೆಯನೊಡನೆ ಹೀಗೆ ಹೇಳಿದನು: ನನ್ನ ಮನಸ್ಸಿನಲ್ಲಿ ಜಮಾಅತ್ ಮತ್ತು ಖ಼ಿಲಾಫತಿನ

ಕುರಿತು ಕೆಲವು ಸಂಶಯಗಳು ಇದ್ದುವು. ಈಗ ಈ ಭೇಟಿಯ ಕಾರಣದಿಂದ ಅವೆಲ್ಲವೂ ದೂರವಾಗಿವೆ. ಅದೇ ರೀತಿಯಲ್ಲಿ ಭೇಟಿಯ ನಂತರ ಮಕ್ಕಳ, ಮಹಿಳೆಯರ, ಪುರುಷರ ಭಾವನಾತ್ಮಕ ಅನಿಸಿಕೆಗಳ ಒಂದು ದೊಡ್ಡ ಪಟ್ಟಿ ಇದೆ. ಅವುಗಳನ್ನು ನೀವು ರಿಪೋರ್ಟ್‌ಗಳಲ್ಲಿ ಓದುತ್ತಿರಬಹುದು. ಝಿಯಾಇನ್‌ನಲ್ಲೂ, ಡೇಲಸ್‌ನಲ್ಲೂ ಬೈತುರ್ರಹ್ಮಾನ್ ನಮಾಝ್‌ಗಳಲ್ಲಿ ಮಹಿಳೆಯರ, ಮಕ್ಕಳ ಮತ್ತು ಜನರ ಹಾಜರಿ ಇರುತಿತ್ತು. ಜನರ ಹೃದಯಗಳಲ್ಲಿ ಖಿಲಾಫತಿನೊಂದಿಗೆ ಪ್ರೀತಿ ಮತ್ತು ನಿಷ್ಠೆಯಿದೆ ಎಂದು ಅವರ ಭಾವನೆಗಳಿಂದ ಸ್ಪಷ್ಟವಾಗಿ ಕಾಣಬಹುದಾಗಿತ್ತು. ಮಸೀದಿಯಲ್ಲಿ ಜಾಗ ಲಭಿಸಲಿಕ್ಕಾಗಿ ವಿದ್ಯಾವಂತರು, ಶ್ರೀಮಂತರು, ಬಡವರು, ಮಕ್ಕಳು, ಹಿರಿಯರು ಮತ್ತು ಭೌತಿಕ ಕೆಲಸಗಳಲ್ಲಿ ನಿರತರಾಗಿರುವವರು ಕೂಡ ಮಸೀದಿಯೊಳಗೆ ನಮಾಝ್‌ಗಳಲ್ಲಿ ಹಾಜರಾಗಲು ಗಂಟೆಗಟ್ಟಲೆ ಸಾಲುಗಟ್ಟಿ ನಿಲ್ಲುತ್ತಿದ್ದರು. ಅಲ್ಲಾಹನ ಕೃಪೆಯಿಂದ ಧರ್ಮ ಮತ್ತು ಜಮಾಅತಿನೊಂದಿಗೆ ಪ್ರೀತಿ ಹಾಗೂ ಖಿಲಾಫತ್‌ನೊಂದಿಗೆ ಸಂಬಂಧವು ಅಮೇರಿಕ ಜಮಾಅತಿನ ಸದಸ್ಯರ ಹೃದಯಗಳಲ್ಲಿ ಇದೆಯೆಂಬುದು ಈ ಬದಲಾವಣೆಯಿಂದ ಸ್ಪಷ್ಟವಾಗುತ್ತದೆ. ಹನ್ನೊಂದು ಹನ್ನೆರಡು ವರ್ಷ ಪ್ರಾಯದ ಮಕ್ಕಳು ಕೂಡ ಕೋವಿಡ್ ಚೆಕಿಂಗ್ ಇತ್ಯಾದಿಗಳ ಕಾರಣದಿಂದ ಗಂಟೆಗಟ್ಟಲೆ ಲೈನಿನಲ್ಲಿ ನಿಲ್ಲುತ್ತಿದ್ದರು. ಆದರೆ ಯಾವತ್ತೂ ಯಾರೂ ಯಾವುದೇ ಆಕ್ಷೇಪ ಎತ್ತಲಿಲ್ಲ. ವ್ಯವಸ್ಥೆಯನ್ನು ಪೂರ್ಣವಾಗಿ ಅನುಸರಿಸುತ್ತಾ ನಿಷ್ಠೆ ಮತ್ತು ಪ್ರಾಮಾಣಿಕತೆಯ ಮಾದರಿಯನ್ನು ತೋರಿಸಿದರು. ಹನ್ನೊಂದು ಹನ್ನೆರಡು ವರ್ಷ ಪ್ರಾಯದ ಒಬ್ಬ ಹುಡುಗನ ತಾಯಿ ನನ್ನೊಡನೆ ಹೀಗೆ ಹೇಳಿದರು: ನೀವು ಇಲ್ಲಿಗೆ ಬಂದ ನಂತರ ನನ್ನ ಮಗನು ಮಸೀದಿಗೆ ಬರಲಿಕ್ಕಾಗಿ ಐದಾರು ಗಂಟೆಗಳಿಗೆ ಮುಂಚಿತವಾಗಿ ಬಂದು ಲೈನಿನಲ್ಲಿ ನಿಲ್ಲುತ್ತಿದ್ದನು. ಯಾವುದೇ ಸಂಗತಿಯ ಪರಿವೆ ಇರಲಿಲ್ಲ. ಇಷ್ಟೊಂದು ಚಿಂತೆಯಿಂದ ಅವನು ಇದಕ್ಕಿಂತ ಮೊದಲು ನಮಾಝಿಗೆ ಬಂದಿರಲಿಲ್ಲ. ಹೇಗಿದ್ದರೂ ಮಕ್ಕಳಲ್ಲಿ, ಹುಡುಗ ಹುಡುಗಿಯರಲ್ಲೂ, ಎಲ್ಲರಲ್ಲೂ ನಾನು ಸಂತೋಷದ ಸಂಬಂಧವನ್ನು ಕಂಡೆನು. ಇದು ಜಮಾಅತಿನ ಮೇಲೆ ಅಲ್ಲಾಹನ ಕೃಪೆಯಾಗಿದೆ. ಎಲ್ಲಡೆ ನಮಾಝಿನ ಹಾಜರಿಯು ವ್ಯವಸ್ಥಾಪಕರ ಪ್ರತೀಕ್ಷೆಗಿಂತ ಅಧಿಕವಾಗುತಿತ್ತು.

ಮಸೀದಿಗಳೊಂದಿಗೆ ಈ ಸಂಬಂಧ ಮತ್ತು ಆರಾಧನೆಗಳ ಬಗ್ಗೆಯಿರುವ ಚಿಂತೆ ಸದಾ ಉಂಟಾಗುವಂತೆ ಅಲ್ಲಾಹನು ಮಾಡಲಿ. ಈ ಪ್ರಾಮಾಣಿಕತೆ ಮತ್ತು ನಿಷ್ಠೆಯ ದೃಶ್ಯಗಳನ್ನು ಅಲ್ಲಾಹನು ಸದಾ ಅಮೇರಿಕ ಜಮಾಅತಿನ ವ್ಯಕ್ತಿಗಳಲ್ಲಿ ನೆಲೆನಿಲ್ಲಿಸಲಿ ಮತ್ತು ಮಸೀದಿಗಳು ಕೂಡ ಇದೇ ರೀತಿಯಲ್ಲಿ ಜನನಿಬಿಡವಾಗಿರಲಿ.

ಅಮೇರಿಕದಂತಹ ದೇಶಗಳಲ್ಲಿ ಜನರು ಧರ್ಮವನ್ನು ಮರೆತುಬಿಡುತ್ತಾರೆ ಎಂದು ಭಾವಿಸುತ್ತಾರೆ. ಆದರೆ ಹೆಚ್ಚಿನವರು ಆರ್ಥಿಕವಾಗಿ ದುರ್ಬಲರು ಕೂಡ ತಾವು ಮತ್ತು ತಮ್ಮ ಮಕ್ಕಳು ಧರ್ಮದೊಂದಿಗೆ ಮತ್ತು ಖಿಲಾಫತಿನೊಂದಿಗೆ ಹೊಂದಿಕೊಂಡಿರಲು ವಿಶೇಷವಾಗಿ ದುಆ ಮಾಡಬೇಕೆಂದು ವಿನಂತಿಸುತ್ತಿದ್ದರು. ಅಲ್ಲಾಹನು ಅವರ ಪ್ರಾಮಾಣಿಕತೆ ಮತ್ತು ನಿಷ್ಠೆಯನ್ನು ಸದಾ ವರ್ಧಿಸುತ್ತಾ ಇರಲಿ.

ಲಜ್ನ, ಅನ್ಸಾರ್, ಖುದ್ದಾಮ್ ಮತ್ತು ಮಕ್ಕಳು ಕೂಡ ಬಹಳ ಪರಿಶ್ರಮಪಟ್ಟು ಆ ದಿನಗಳಲ್ಲಿ ತಮ್ಮ ಡ್ಯೂಟಿಗಳನ್ನು ಮಾಡುತ್ತಿದ್ದರು. ಅನೇಕ ದಿನಗಳು ನಿದ್ದೆ ಮಾಡದೇ ತಯಾರಿಗಳನ್ನು ಮಾಡಿದರು. ಹಾಜರಿಯು ಎಲ್ಲಡೆ ಸಾವಿರದಷ್ಟು ಇರುತ್ತಿತ್ತು. ಬೈತುರ್ರಹ್ಮಾನಿನಲ್ಲಿ ಜಲ್ಸಗಿಂತ ಹೆಚ್ಚು ಹಾಜರಿಯಿತ್ತು. ಆದರೆ ಬಹಳ ವ್ಯವಸ್ಥಾಪಿತವಾಗಿ ಅವರು ತಮ್ಮ ಕೆಲಸಗಳನ್ನು ನಿಭಾಯಿಸಿದರು. ಅಮೇರಿಕ ಜಮಾಅತಿನ ಸದಸ್ಯರಲ್ಲಿ ಈ ಬದಲಾವಣೆ ತಾತ್ಕಾಲಿಕವಾಗದೇ ಎಂದೆಂದಿಗೂ ಇರುವಂತೆ ಅಲ್ಲಾಹನು ಮಾಡಲಿ. ಈಗ ನಾನು ಅನ್ಯರ ಕೆಲವು ಅನಿಸಿಕೆಗಳನ್ನು ಪ್ರಸ್ತಾಪಿಸುತ್ತೇನೆ. ಅಲ್ಲಾಹನು ಅನ್ಯರ ಹೃದಯಗಳಲ್ಲೂ ಅಸಾಮಾನ್ಯವಾದ ಪ್ರಭಾವವನ್ನು ಉಂಟುಮಾಡಿರುವನು. ಅಲ್ಲಾಹನು ಅವರ ಹೃದಯಗಳನ್ನು ಇನ್ನಷ್ಟು ತೆರೆಯಲಿ ಮತ್ತು ಈ ಜನರು ಸತ್ಯವನ್ನು ಅರಿಯುವಂತಾಗಲಿ.

ಝಿಯಾಯಿನಿನಲ್ಲಿ ಫತ್‌ಹೇ ಅಝೀಂ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ 161 ಮುಸ್ಲಿಮೇತರ ಮತ್ತು ಅಹ್ಮದಿಯೇತರ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ಕಾಂಗ್ರೆಸ್‌ಮೆನ್, ಕಾಂಗ್ರೆಸ್‌ವಿಮೆನ್, ಮೇಯರ್‌ಗಳು, ಡಾಕ್ಟರರು, ಪ್ರೊಫೆಸರರು, ಟೀಚರರು, ವಕೀಲರು, ಇಂಜಿನಿಯರರು ಮತ್ತು ವಿವಿಧ ವಿಭಾಗಗಳಿಗೆ ಸಂಬಂಧಪಟ್ಟ ವ್ಯಕ್ತಿಗಳು ಇದ್ದರು.

ಝಿಯೋನಿನ ಮೇಯರ್ ಬಿಲ್ಲಿ ಮೇಕೀನಿ ಸಾಹಿಬ್‌ರು ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿಕೊಂಡರು: ಫತ್‌ಹೇ ಅಝೀಂ ಮಸೀದಿಯ ಉದ್ಘಾಟನೆಯ ವೇಳೆ ಅಹ್ಮದಿಯಾ ಜಮಾಅತಿನ ಜಾಗತಿಕ ನೇತಾರರಿಗೆ ಶುಭಾಶಯವನ್ನು ಕೋರುವುದು ನನಗೆ ಅತ್ಯಂತ ಗೌರವದ ಸಂಗತಿಯಾಗಿದೆ. ಝಿಯಾಇನಿನಲ್ಲಿ ನಮ್ಮ ಆದರ್ಶವಾಕ್ಯ "Historic Past and dynamic future" (ಐತಿಹಾಸಿಕ ಗತಕಾಲ ಮತ್ತು ಸಜೀವ ಭವಿಷ್ಯಕಾಲ) ಎಂದಾಗಿದೆ. ನಮ್ಮ ಪಟ್ಟಣದ ಹೃದಯ ಭಾಗದಲ್ಲಿ ಈ ಸುಂದರ ಮಸೀದಿ ಈ ಸೂಕ್ತಿಗೆ ಒಂದು ಉತ್ತಮ ಉದಾಹರಣೆಯಾಗಿದೆ. ಈ ಆರಾಧನಾಲಯವು ನಮ್ಮ ಗತಕಾಲ ಮತ್ತು ಭವಿಷ್ಯದ ನಡುವೆ ಒಂದು ಸೇತುವೆಯಂತೆ ಆಗಲಿ ಎಂಬುದು ನನ್ನ ಪ್ರಾರ್ಥನೆ ಮತ್ತು ನನ್ನ ಬಯಕೆಯಾಗಿದೆ.

ಈ ಮಸೀದಿಯು ವೈಭವಶಾಲಿ ವಿಶ್ವಾಸದಿಂದ ಕೂಡಿರುವ ಕಮ್ಯೂನಿಟಿಯ ಪ್ರತಿನಿಧಿಗಳಿಂದ ತುಂಬಿಕೊಂಡಿದೆ ಎಂಬುದು ನನಗೆ ಝಿಯಾಇನಿನ ಭವಿಷ್ಯದ ಬಗ್ಗೆ ಉತ್ತಮ ಪ್ರತೀಕ್ಷೆಯನ್ನು ಉಂಟುಮಾಡುತ್ತಿದೆ. ಅಹ್ಮದಿಯಾ ಕಮ್ಯೂನಿಟಿ ತಂದಿರುವ ಸಂದೇಶವನ್ನು ನೋಡುವಾಗ ನನಗೆ ಸಂತೋಷವಾಗುತ್ತದೆ. ಈ ಸಂಘಟಿತ ಜಮಾಅತ್ ಇಸ್ಲಾಮಿನ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಗೌರವಿಸುವುದರೊಂದಿಗೆ ಕ್ರೈಸ್ತರೊಡನೆ ಸಂಧಾನವನ್ನು ಮಾಡಿಕೊಂಡಿದೆ. ಈ ಪಟ್ಟಣಕ್ಕಾಗಿ ಅಹ್ಮದಿಯಾ ಕಮ್ಯುನಿಟಿ ಮಹತ್ತಾದ ಸೇವೆಗಳನ್ನು ಮಾಡಿವೆ. ಅದಕ್ಕಾಗಿ ನಾನು ಧನ್ಯನಾಗಿದ್ದೇನೆ. ನಾವು ಈ ಪಟ್ಟಣದ ಕೀಲಿಗೈಯನ್ನು ಅಹ್ಮದಿಯಾ ಜಮಾಅತಿಗೆ ನೀಡುತ್ತೇವೆ.

ಅದೇ ರೀತಿ ಅವರು ಹೇಳಿತ್ತಾರೆ ನಾನು ಈ ಪಟ್ಟಣದಲ್ಲಿ 1962ರಿಂದ ಇದ್ದೇನೆ. ಇದು ಝಿಯಾಇನ್ ಮತ್ತು ಜಮಾಅತಿಗೆ ಒಂದು ಐತಿಹಾಸಿಕ ಕಾರ್ಯಕ್ರಮವಾಗಿದೆ. ಮತ್ತೆ ಅವರು ನನ್ನೊಂದಿಗೆ ಬಹಳ ಭಾವುಕರಾಗಿ ಹೇಳಿದರು ಇಂದು ನೀವು ನನಗೆ ನಿಶ್ಶಬ್ಧರಾಗಿಸಿರಿದ್ದೀರಿ, ನಮ್ಮೊಂದಿಗೆ ನಿಮ್ಮ ಉಪಸ್ಥಿತಿಯು ಬಹಳ ಉತ್ತಮವಾಗಿತ್ತು.

ಮೆಂಬರ್ ಆಫ್ ಇಲ್ಲಿನೋಯ್ಸ್ ಜನರಲ್ ಅಸೆಂಬ್ಲಿ ಆನ್ರೇಬಲ್ ಜೋಯಿಸ್ ಮೇಸನ್ ಹೀಗೆ ಹೇಳಿದರು: ಝಿಯಾಯಿನಿನಲ್ಲಿ ಮಸೀದಿಯ ಐತಿಹಾಸಿಕ ಸಮಾರಂಭದ ಭಾಗವಾಗುವುದು ನನಗೆ ಗೌರವದ ಸಂಗತಿಯಾಗಿದೆ. ಅಹ್ಮದಿಯಾ ಜಮಾಅತಿಗೆ ಝಿಯಾಇನ್ ಪಟ್ಟಣವು ಐತಿಹಾಸಿಕ ಪ್ರಾಮುಖ್ಯವನ್ನು ಪಡೆದಿದೆ. ಇಂದು ಈ ಪಟ್ಟಣಕ್ಕೆ ಇದೊಂದು ಐತಿಹಾಸಿಕ ದಿನವಾಗಿದೆ. ಝಿಯಾಇನ್ ಪಟ್ಟಣದ ಬುನಾದಿಯನ್ನು ಕಳೆದ ಶತಮಾನದ ಆರಂಭದಲ್ಲಿ ಅಲೆಕ್ಸಾಂಡರ್ ಡೂಯಿ ಇರಿಸಿದ್ದನು. ಈ ಪಟ್ಟಣದ ಬಾಗಿಲುಗಳನ್ನು ಅಲೇಕ್ಸಾಂಡರ್ ಡೂಯಿ ತನ್ನನ್ನು ನಂಬಿದವರಿಗೆ ಹೊರತುಪಡಿಸಿ ಇತರ ಎಲ್ಲರಿಗೂ ಮುಚ್ಚಿದ್ದರು. ಆದರೆ ಇಂದು ಈ ಪಟ್ಟಣವು ವಿವಿಧ ಧರ್ಮಾವಲಂಬಿಗಳ ಮನೆಯಾಗಿದೆ. ಇದು ಸತ್ಯವಿಶ್ವಾಸಿಗಳ ದುಆ ಸ್ವೀಕಾರದ ಒಂದು ಚಿಹ್ನೆಯಾಗಿದೆ.

ಈ ವೈಭವಶಾಲಿ ವಿಜಯಕ್ಕೆ ಅಹ್ಮದಿಯಾ ಕಮ್ಯೂನಿಟಿಗೆ ನಾನು ಶುಭಾಶಯಗಳನ್ನು ಕೋರುತ್ತೇನೆ. ಅಹ್ಮದಿಯಾ ಜಮಾಅತಿನ ಇಮಾಂ ಶಾಂತಿಗೆ ಒತ್ತುಕೊಡುವ ಮುಸ್ಲಿಂ ನೇತಾರರಾಗಿರುವರು. ಅವರು ಶಾಂತಿಸ್ಥಾಪನೆಗೆ ಒತ್ತುಕೊಡುತ್ತಾ ಪೂರ್ತಿ ಲೋಕದ ಶಾಸಕರೊಡನೆ ಮತ್ತು ಇತರ ನಾಯಕರೊಡನೆ ಮಾತುಕತೆ ನಡೆಸಿರುವರು. ಶಾಂತಿಪ್ರಿಯ ಮತ್ತು ಮನುಕುಲದ ಸೇವೆ ಮಾಡುವ ಕಮ್ಯೂನಿಟಿಯು ಇಲ್ಲಿ ವಾಸಿಸಲು ಮತ್ತು ಇಷ್ಟು ಸುಂದರವಾದ ಮಸೀದಿಯನ್ನು ನಿರ್ಮಿಸಲು ತೀರ್ಮಾನಿಸಿದೆ ಎಂಬುದು ಈ ಪಟ್ಟಣದ ಸೌಭಾಗ್ಯವಾಗಿದೆ.

ಈ ಮಸೀದಿಯು ಈ ಪಟ್ಟಣಕ್ಕೆ ಮಾತ್ರವಲ್ಲ, ಬದಲಾಗಿ ಎಲ್ಲ ಕಡೆಗಳಿಗೂ ಪ್ರತೀಕ್ಷೆಯ ಒಂದು ಕಿರಣವಾಗಲಿ ಎಂದು ನಾನು ಮನಸ್ಸಾರೆ ಆಶಿಸುತ್ತೇನೆ. ನಾನು ಈ ಕಮ್ಯೂನಿಟಿಗೆ ಮಸೀದಿಯ ಉದ್ಘಾಟನೆಯ ಶುಭಾಶಯವನ್ನು ಕೋರುತ್ತಾ ಒಂದು ಠರಾವನ್ನು ಸಮರ್ಪಿಸುತ್ತೇನೆ.

ಲೇಂಟಸ್ ಫೌಂಡೇಶನ್ ಫಾರ್ ಹ್ಯೂಮನ್ ರೈಟ್ಸ್ ಎಂಡ್ ಜಸ್ಟಿಸಿನ ಅಧ್ಯಕ್ಷರಾಗಿರುವ ಡಾಕ್ಟರ್ ಕತ್ರೀನ ಲೇಂಟಸ್ ಹೇಳುತ್ತಾರೆ: ನಾನು ಅಹ್ಮದಿಯಾ ಜಮಾಅತಿನ ಸದಸ್ಯರನ್ನು ಭೇಟಿಯಾಗುವಾಗುವಾಗಲೆಲ್ಲ ನನ್ನ ಆಧ್ಯಾತ್ಮಿಕತೆ ವರ್ಧಿಸುವುದಾಗಿ ನಾನು ಅನುಭವಿಸುತ್ತೇನೆ. ಝಿಯಾಇನಿನಲ್ಲಿ ನಡೆದ ಮುಬಾಹಿಲದ ಬಗ್ಗೆ ಆಲಿಸಿ ನಾನು ಅಚ್ಚರಿಗೊಂಡೆ. ಮೊಬೈಲ್ ಫೋನ್, ಕಂಪ್ಯೂಟರ್ ಮತ್ತು ಇತರ ಸಂಪರ್ಕ ಮಾಧ್ಯಮಗಳು ಇಲ್ಲದ ಕಾಲದಲ್ಲೂ ಈ ಆಧ್ಯಾತ್ಮಿಕ ಹೋರಾಟದ ಬಗ್ಗೆ ಇಷ್ಟು ಹೆಚ್ಚು ಪ್ರಚಾರಕೊಂಡಿತ್ತು ಎಂಬುದು ಆಶ್ಚರ್ಯಕರವಾಗಿದೆ.

ಒಂದೆಡೆ ಹಗೆ ಮತ್ತು ಪರಸ್ಪರ ಭಿನ್ನತೆಯ ಆಧಾರದಲ್ಲಿ ಇದ್ದ ಡಾಕ್ಟರ್ ಜಾನ್ ಡೂಯಿಯ ದೃಷ್ಟಿಕೋನ. ಮತ್ತೊಂದೆಡೆ ಪರಸ್ಪರ ಗೌರವ, ತಾಳ್ಮೆಯ ಆಧಾರದಲ್ಲಿ ಇದ್ದ ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಮಿರ್ಝಾ ಗುಲಾಂ ಅಹ್ಮದ್ ಸಾಹಿಬ್‌ರ ದೃಷ್ಟಿಕೋನ. ಅದಂತು ಮುಬಾಹಿಲದ ಫಲಿತಾಂಶವನ್ನು ಪೂರ್ಣವಾಗಿಯೂ ಅಲ್ಲಾಹನಿಗೆ ಒಪ್ಪಿಸಿದ ಒಬ್ಬ ವ್ಯಕ್ತಿಯ ಕಡೆಯಿಂದಾಗಿತ್ತು. ಈ ಮುಬಾಹಿಲದಲ್ಲಿ ಯಾರಿಗೆ ವಿಜಯ ಉಂಟಾಯಿತು ಎಂಬುದನ್ನು ನಾವು ಬಲ್ಲೆವು. ಉದ್ಘಾಟನೆಗೊಳ್ಳುತ್ತಿರುವ ಮಸೀದಿಯ ಹೆಸರನ್ನು ಫತ್‌ಹೇ ಅಝೀಂ ಎಂದು ಇರಿಸಲಾಗಿದೆ. ಅದರ ಅರ್ಥ ಮಹತ್ತಾದ ವಿಜಯವೆಂದಾಗಿದೆ. ಖಂಡಿತವಾಗಿಯೂ ಈ

ಮುಬಾಹಿಲದಲ್ಲಿ ಈ ವಿಜಯ ಅಹ್ಮದಿಯಾ ಜಮಾಅತಿಗೆ ಲಭಿಸಿತ್ತು. ಆದರೆ ಇದು ಅಹ್ಮದಿಯಾ ಜಮಾಅತಿನ ವಿಜಯ ಮಾತ್ರವಲ್ಲ, ಬದಲಾಗಿ ಮನುಷ್ಯತ್ವದ ವಿಜಯವಾಗಿದೆ. ಏಕೆಂದರೆ, ಇದರಿಂದ ಪರಸ್ಪರ ಗೌರವ, ಪ್ರೀತಿ, ತಾಳ್ಮೆಯ ವಿಜಯ ಉಂಟಾಗಿದೆ. ಅದರ ಮಾದರಿಯನ್ನು ನಾವು ಈಗ ಈ ವೈಭವಶಾಲಿ ಜಮಾಅತಿನಲ್ಲಿ ನೋಡುತ್ತಿದ್ದೇವೆ. ಇಂದು ನಾವು ಇಲ್ಲಿ ಈ ಸುಂದರವಾದ ಮತ್ತು ಶಾಂತಿಪೂರ್ಣ ವಾತಾವರಣದಲ್ಲಿ ಕುಳಿತುಕೊಳ್ಳುತ್ತಿರುವಾಗ ಪಾಕಿಸ್ತಾನದಲ್ಲಿ ತಮ್ಮ ಧರ್ಮದ ಕಾರಣದಿಂದ ದಿನಾಲೂ ವಿವರಿಸಲು ಅಸಾಧ್ಯವಾದ ದೌರ್ಜನ್ಯ ಮತ್ತು ಪೀಡನೆಗೆ ತುತ್ತಾಗಿರುವ ಅಹ್ಮದಿಯರನ್ನು ಕೂಡ ನೆನಪಿಸಬೇಕು.

ಝಿಯಾನಿನ ಮಾಜಿ ಕಮಿಶನರ್ ಏಮ್ಸ್ ಮೋಂಕ್ ಸಾಹಿಬ್ ತನ್ನ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸಿಕೊಂಡರು: ನಿಮ್ಮ ಅಧ್ಯಾಪನೆಯು ಎಲ್ಲವನ್ನು ಒಳಗೊಂಡಿದೆ. ಲೋಕಕ್ಕೆ ಇದರ ಬಗ್ಗೆ ಹೆಚ್ಚು ಗೊತ್ತಿರಬೇಕು. ಇದು ಇಂದಿನ ಲೋಕದ ಅತ್ಯಂತ ಸುಂದರವಾದ ರಹಸ್ಯವಾಗಿದೆ. ನ್ಯಾಯಪಾಲನೆ, ನೀತಿ, ನಿಷ್ಠೆ ಮತ್ತು ಪ್ರೀತಿಯ ಸಂದೇಶವನ್ನು ಒಳಗೊಂಡಿರುವ ಲೀಫ್‌ಲೆಟನ್ನು ನಾನು ನನ್ನ ಮುಂದೆ ಕಾಣುತ್ತಿದ್ದೇನೆ. ಲೋಕಕ್ಕೆ ಆವಶ್ಯವಾಗಿರುವ ಸಂಗತಿಗಳು ಇವೇ ಆಗಿವೆ. ಹಗೆಂಯನ್ನು ಕೊನೆಗೊಳಿಸಿದರೆ, ಲೋಕವು ಸ್ವರ್ಗೀಯವಾಗುವುದು. ಈ ಸಂದೇಶವನ್ನು ಪೂರ್ತಿ ಲೋಕ ಆಲಿಸಬೇಕು. ಲೋಕದ ಸಮಸ್ಯೆಗಳಿಗೆ ಪರಿಹಾರ ಇದೊಂದೇ ಆಗಿದೆ.

ಹಝ್ರತ್ ಪೈಗಂಬರ್(ಸ)ರ ಜೀವಿತದ ಬಗ್ಗೆ ಒಂದು ಪುಸ್ತಕವನ್ನು ಬರೆದಿರುವ, ಪ್ರಬಲ ಕ್ರೈಸ್ತ ಕೂಡ ಆಗಿರುವ ಪ್ರೊಫೆಸರ್ ಕ್ರೇಗ್ ಕೊನ್ಸಿಡನ್ ಹೇಳುತ್ತಾರೆ: ಖಲೀಫತುಲ್ ಮಸೀಹರು ನನ್ನನ್ನು ಹಳೆಯ ಗೆಳೆಯನಂತೆ ಭೇಟಿಯಾದರು ಎಂಬುದು ನನ್ನನ್ನು ಭಾವುಕಗೊಳಿಸಿದೆ.

ಜಮಾಅತಿನ ಇಮಾಮಿನ ಭಾಷಣ ನನಗೆ ತುಂಬಾ ಇಷ್ಟವಾಯಿತು. ಇದರಿಂದ ಇಸ್ಲಾಮಿನ ಬಗ್ಗೆ ನನ್ನ ಅರಿವು ವರ್ಧಿಸಿದೆ.

ನನಗೆ ಈ ಭಾಷಣದ ಲಿಖಿತ ರೂಪ ಲಭಿಸುವಾಗ ಅದನ್ನು ನಾನು ಬರೆಯಲಿರುವ ನನ್ನ ಮುಂದಿನ ಪುಸ್ತಕದಲ್ಲಿ ಉಪಯೋಗಿಸುವೆನು. ಜಮಾಅತಿನ ಇಮಾಮರು ಬಹಳ ಸುಂದರವಾದ ಶೈಲಿ ಮತ್ತು ಸರಳ ಪದಗಳಲ್ಲಿ ಈ ವಿಷಯವನ್ನು ಹೇಳಿರುವರು. ಅದನ್ನು ಎಲ್ಲರೂ ಮನವರಿಕೆ ಮಾಡಬಹುದಾಗಿದೆ. ಎಲ್ಲ ಮಾನವೀಯ ಗುಣಗಳನ್ನು ಅಳವಡಿಸಿಕೊಳ್ಳಲು, ಪರಸ್ಪರ ಗೌರವಿಸಲು, ತಾಳ್ಮೆ, ಘನತೆ ಮತ್ತು ಇತರರ ಸ್ವಾಭಿಮಾನದ ಬಗ್ಗೆ ಕಾಳಜಿ ವಹಿಸಲು ಹೇಳಿದ್ದು ನನಗೆ ವಿಶೇಷವಾಗಿ ಇಷ್ಟವಾಯಿತು. ಅವರು ಸತ್ಯವಾಗಿಯೂ ನಮ್ಮೆಲ್ಲರನ್ನು ಪರಸ್ಪರ ಪ್ರೀತಿಯ ಕಡೆಗೆ ಕರೆಯುತ್ತಿದ್ದಾರೆ. ನಾನು ಇಂತಹ ಖುತ್ಬವನ್ನು ಎಂದೂ ಆಲಿಸಿಲ್ಲವೆಂದು ಅವರು ಖುತ್ಬ ಕೇಳಿದ ನಂತರ ಹೇಳಿದರು.

ಒಬ್ಬ ಅತಿಥಿಯಾದ ಮೋಲೋಡಿ ಹೇಳುತ್ತಾರೆ: ನಾನು ಪ್ರೊಡಕ್ಟ್ ಡೆವಲಪ್‌ಮೆಂಟ್ ಮ್ಯಾನೆಜರ್ ಆಗಿರುವೆನು. ಈ ಕಾರ್ಯಕ್ರಮ ಬಹಳ ಆಕರ್ಷಕವಾಗಿತ್ತು. ನಾನು ಅದರಿಂದ ಬಹಳ ಆನಂದಗೊಂಡೆನು.

ಸಮಾಜದಲ್ಲಿ ಹಗೆಯಿರಿಸುವವನಿಗೆ ಯಾವುದೇ ಸ್ಥಾನವಿಲ್ಲವೆಂಬ ಸಂದೇಶ ಬಹಳ ಶ್ರೇಷ್ಠವಾದುದಾಗಿದೆ. ನಿಮ್ಮನ್ನು ನೋಡುವುದು, ನಿಮ್ಮ ಮಾತನ್ನು ಆಲಿಸುವುದು ಬಹಳ ವಿಶೇಷವಾದ ಅನುಭವವಾಗಿದೆ. ನಮ್ಮ ಬಳಿಯಲ್ಲಿರುವುದು ದುಆದ ಆಯುಧವಾಗಿದೆ ಎಂಬ ಅಹ್ಮದಿಯಾ ನೇತಾರರ ಮಾತು ನನಗೆ ಬಹಳ ಇಷ್ಟವಾಯಿತು.

ಜೇಫ್ ಫೇಂಡರ್ ಎಂಬ ಹೆಸರಿನ ಅತಿಥಿಯೊಬ್ಬರು ಹೀಗೆ ಹೇಳಿದರು: ನಾನು ಸೆರ್ಟಿಫೈಡ್ ಪಬ್ಲಿಕ್ ಅಕೌಂಟೆಂಟ್ ಆಗಿರುವೆ. ರಿಯಲ್ ಎಸ್ಟೇಟ್ ಕೆಲಸವನ್ನೂ ಮಾಡುತ್ತೇನೆ. ಇದು ನನ್ನ ಮೊದಲ ಅನುಭವವಾಗಿದೆ. ಬಹಳ ಪ್ರಭಾವಿತನಾಗಿದ್ದೇನೆ. ಇಲ್ಲಿಯ ಮಸೀದಿಯ ಉದ್ಘಾಟನೆಗೆ ಬರುವುದು ನನ್ನ ಜೀವಿತದ ಒಂದು ಅಮೂಲ್ಯ ಅವಕಾಶವಾಗಿದೆ. ಖಲೀಫರ ಭಾಷಣದಿಂದಲೂ ಬಹಳ ಪ್ರಭಾವಿತನಾಗಿದ್ದೇನೆ. ನಿಮ್ಮ ಬಗ್ಗೆ ಬಹಳಷ್ಟು ಮಾಹಿತಿಗಳು ನನಗೆ ಲಭಿಸಿದೆ. ಮುಬಾಹಿಲ ಪಂಥಾಹ್ವಾನವು ನನಗೆ ಹೊಸ ವಿಷಯವಾಗಿದೆ. ಇದರ ಬಗ್ಗೆ ಇನ್ನಷ್ಟು ಓದುವೆನು.

ಮೇಟರಿಂಡರ್ ಎಂಬ ಹೆಸರಿನ ಹೈಸ್ಕೂಲ್ ಟೀಚರ್ ಹೇಳುತ್ತಾರೆ: ಇಮಾಂ ಜಮಾಅತಿನ ಸಂದೇಶ ಮತ್ತು ಅವರು ಹೇಳುವ ಶೈಲಿ ನನಗೆ ತುಂಬಾ ಇಷ್ಟವಾಯಿತು. ನನ್ನಂತಹ ಅನೇಕ ಜನರು ಈ ಸಂದೇಶವನ್ನು ಸುಲಭವಾಗಿ ಮನವರಿಕೆ ಮಾಡಬಹುದಾಗಿದೆ.

ಎಮರ್ಜನ್ಸಿ ಸರ್ವಿಸ್‌ನ ಮೇರಿ ಲೋಹಾಯಿಲ್ ಹೇಳುತ್ತಾರೆ: ನಾನು ಬಹಳ ಪ್ರಭಾವಿತಗೊಂಡಿದ್ದೇನೆ. ನಿಮ್ಮ ಸಂದೇಶದಲ್ಲಿ ಪ್ರಾಮಾಣಿಕತೆ ಹೊಮ್ಮುತ್ತಿತ್ತು. ಯಾವುದೇ ತೋರಿಕೆಯಿರಲಿಲ್ಲ. ಎಲ್ಲ ರೀತಿಯಲ್ಲೂ ಸತ್ಯ ಮತ್ತು ಶುದ್ಧ ಶೈಲಿಯಾಗಿತ್ತು. ಇದರಿಂದ ಪ್ರತಿಯೊಬ್ಬರು ನಿಮ್ಮ ದಿನನಿತ್ಯದ ಜೀವಿತದ ಬಗ್ಗೆ ಅಂದಾಜು ಮಾಡಬಹುದಾಗಿದೆ.

ವೀಂಟಡ್ ಪ್ರದೇಶದ ಶಾಲೆಗಳ ಮೇಲಾಧಿಕಾರಿಯಾಗಿರುವ ಡಾಕ್ಟರ್ ಜ್ಯೆಸಿ ರಾಡರಂಗಸ್ ಹೇಳುತ್ತಾರೆ: ಜಮಾಅತಿನ ಇಮಾಮರ ಭಾಷಣದ ತಿರುಳು ಪರಸ್ಪರ ಒಗ್ಗಟ್ಟು ಎಂಬುವುದಾಗಿತ್ತು. ಬಹಳ ಶ್ರೇಷ್ಠವಾದ ಸಂದೇಶವಾಗಿತ್ತು. ಎಲ್ಲ ಧರ್ಮಗಳು ಪ್ರಮುಖವೆಂದೂ ನಾವೆಲ್ಲರೂ ಒಟ್ಟಾಗಿ ಇರಬಹುದೆಂದು ಖಲೀಫರು ಹೇಳಿದರು. ಬಹಳ ಉತ್ತಮವಾಗಿತ್ತು.

ಪ್ರಾದೇಶಿಕ ಶಾಲೆಯ ಒಬ್ಬ ಪ್ರಾಂಶುಪಾಲರಾದ ಝೀಕ್ ಲೇವಂಗ್ ಹೇಳುತ್ತಾರೆ: ಜಮಾಅತಿನ ಇಮಾಮರ ಮಾತು ತನ್ನೊಳಗೆ ಒಂದು ಆಕರ್ಷಣೆಯನ್ನು ಹೊಂದಿದೆ. ವಿಶೇಷವಾಗಿ ಮಾನವೀಯ ಹಕ್ಕುಗಳು ಮತ್ತು ಮಾನವನ ಸೇವೆಗಾಗಿ ಪ್ರಯತ್ನಗಳು ಬಹಳ ಪ್ರಭಾವಶಾಲಿಯಾಗಿವೆ. ಪ್ರೀತಿ ಎಲ್ಲರೊಂದಿಗೂ, ಯಾರೊಂದಿಗೂ ಹಗೆಯಿಲ್ಲವೆಂಬ ನಮ್ಮ ಆದರ್ಶ ಸೂತ್ರವಾಕ್ಯ ಎಲ್ಲ ಸಮುದಾಯಗಳಲ್ಲಿ, ಎಲ್ಲ ಧರ್ಮಗಳಲ್ಲಿ ಮತ್ತು ವಿಶೇಷವಾಗಿ ಪೂರ್ತಿ ಝಿಯಾಯಿನ್ ನಗರದಲ್ಲಿ ಪ್ರತಿಧ್ವನಿಸುತ್ತಿದೆ. ಈ ಸಂದೇಶದ ತೀವ್ರ ಆವಶ್ಯಕತೆಯಿದೆ.

ಸಾಂಕ್ರಾಮಿಕ ಸ್ಥಿತಿಯ ನಂತರ ನಮ್ಮ ಕುಟುಂಬಗಳಲ್ಲಿ ಮತ್ತು ವಿದ್ಯಾರ್ಥಿಗಳಲ್ಲಿ ಬಹಳ ಭಾವನಾತ್ಮಕ ಮತ್ತು ಸಾಮಾಜಿಕ ಅವನತಿ ಉಂಟಾಗಿದೆ. ನಾವು ಈ ಸಮಸ್ಯೆಗಳಿಂದ ಹೊರಗೆ ಬರಲು ಈ ಸಂದೇಶದ ಅತಿಯಾದ ಆವಶ್ಯಕತೆಯಿದೆ.

ಝಿಯಾಇನ್ ಮಸೀದಿಯ ಅಡಿಗಲ್ಲು ಇರಿಸುವ ಸಂದರ್ಭದಲ್ಲಿ ಇಟ್ಟಿಗೆಯನ್ನು ಕೂಡ ಇರಿಸಿದ್ದ ಒಬ್ಬ ಅತಿಥಿ ಬಂದಿದ್ದರು. ಅವರು ಹೇಳುತ್ತಾರೆ: ಇಂದು ಒಂದು ಸುಂದರವಾದ ದಿನವಾಗಿದೆ. ನನಗೆ ಕಳೆದ ವರ್ಷ ಈ ಮಸೀದಿಯ ಬುನಾದಿ ಹಾಕಲಾಗುವಾಗ ಭಾಗಿಯಾಗಲು ಅವಕಾಶ ಲಭಿಸಿತ್ತು. ನಾನು ಅದರ ನಿರ್ಮಾಣವಾಗಿದ್ದಾಗಿ ನೋಡುತ್ತಿದ್ದೇನೆ. ನಿಮ್ಮ ಮಸೀದಿ ನಮ್ಮ ಸಮುದಾಯಕ್ಕೆ ಪ್ರತೀಕ್ಷೆ ಮತ್ತು ಗೆಳೆತನದ ಮಾರ್ಗವಾಗಿದೆ.

ಝಿಯಾಇನಿನ್ ಪೊಲೀಸ್ ಚೀಫ್ ಆದ ಈರ್ಕ್ ಸಾಹಿಬ್ ಹೇಳುತ್ತಾರೆ: ಬಹಳ ಉತ್ತಮ ಕಾರ್ಯಕ್ರಮವಾಗಿತ್ತು. ಎಲ್ಲ ಜನರಿಂದ ಪ್ರೀತಿ ಮತ್ತು ನಿಷ್ಠೆಯನ್ನು ನೋಡಿ ಸಂತೋಷವಾಯಿತು. ನೀವು ಯಾರೆಂಬುದು ಮುಖ್ಯವಲ್ಲ, ನೀವು ಅನ್ಯೋನ್ಯ ಕಾಳಜಿ ವಹಿಸಬೇಕು ಎಂಬುದಾಗಿದೆ ಮುಖ್ಯವೆಂಬ ಸಂದೇಶ ಉತ್ತಮ ಮತ್ತು ಸುಂದರವಾದ ಸಂದೇಶವಾಗಿದೆ.

ಒಬ್ಬ ಅತಿಥಿಯಾದ ಜನಿಫರ್ ಹೇಳುತ್ತಾಳೆ: ನಿಮ್ಮ ಜಮಾಅತಿನ ತತ್ವಗಳು ಬಹಳ ಉನ್ನತ ಮಟ್ಟದ್ದಾಗಿದೆ. ನೀವು ಝಿಯಾಇನಿನ ಪಟ್ಟಣದಲ್ಲಿ ಹೆಜ್ಜೆ ಹಾಕುವಾಗ ಒಂದು ಹಳೆಯ ಕಟ್ಟಡದಲ್ಲಿ "ಪ್ರೀತಿ ಎಲ್ಲರೊಡನೆ, ಯಾರೊಡನೆಯೂ ಹಗೆಯಿಲ್ಲ" ಎಂಬ ಸಂದೇಶ ಕಾಣಬಹುದಾಗಿದೆ ಮತ್ತು ಅದರ ಪ್ರತಿಧ್ವನಿ ನಿಮ್ಮ ಜೊತೆಗೆ ಇರುತ್ತದೆ. ಇದೇ ಝಿಯಾಯಿನ್ ಪಟ್ಟಣದ ನಿಜವಾದ ಚೈತನ್ಯವಾಗಿದೆ.

ಮತ್ತೊರ್ವ ಅತಿಥಿ ಚೇರಿ ನೀಲ್ ಸಾಹಿಬ ಇವರು ಝಿಯಾಇನ್ ಟೌನ್‌ಶಿಪ್‌ನ ಸುಪರ್ವೈಸರ್ ಆಗಿದ್ದಾರೆ ಅವರು ಹೇಳುತ್ತಾರೆ: ವ್ಯವಸ್ಥೆಗಳಿಂದ ನನಗೆ ಬಹಳ ಆಶ್ಚರ್ಯವಾಗಿದೆ. ನೀವು ನಿಮ್ಮ ಈ ಉದ್ದೇಶದಲ್ಲಿ ಉತ್ತೀರ್ಣರಾಗಿರುವುದು ನನಗೆ ಬಹಳ ಸಂತೋಷವಾಗಿದೆ.

ಮತ್ತೊಬ್ಬ ಅತಿಥಿ ಹೇಳಿದರು: ಲಕ್ಷಾಂತರ ಜನರ ಪ್ರತಿನಿಧಿಯಾಗಿರುವ ಮತ್ತು ಜನರನ್ನು ಪರಸ್ಪರ ಜೋಡಿಸುವ ನಿಮ್ಮಂತಹ ನೇತಾರ ನಮ್ಮ ನಡುವೆ ಇರುವರು ಎಂದು ಗೊತ್ತಾದಾಗ ಸಂತೋಷವಾಯಿತು. ನಾವೆಲ್ಲರೂ ಒಂದೇ ಮತ್ತು ಪ್ರತಿಯೊಂದು ಧರ್ಮಕ್ಕೆ ಪ್ರಾಮುಖ್ಯತೆಯಿದೆ ಎಂಬ ಸಂದೇಶ ಬಹಳ ಉತ್ತಮ ಮತ್ತು ಪ್ರಭಾವಶಾಲಿಯಾಗಿದೆ.

ಗ್ಲೋರಿಯ ಸಾಹಿಬ ಹೇಳುತ್ತಾರೆ: ಝಿಯಾಇನಿನ ಚರಿತ್ರೆ ಜ್ಞಾನಪೂರ್ಣವಾಗಿತ್ತು. ನಾನು ಇಲ್ಲಿ ವಾಸಿಸುವವಳು ಆಗಿರುವೆಯಾದರೂ ಈ ಜಾಗದ ಬಗ್ಗೆ ಸಾಕಷ್ಟು ವಿಷಯಗಳು ಗೊತ್ತಿರಲಿಲ್ಲ. ಮತ್ತೊಬ್ಬ ಅತಿಥಿ ಹೇಳಿದಳು: ನಾನು ಈ ಕಾರ್ಯಕ್ರಮದಿಂದ ತುಂಬಾ ಆನಂದವನ್ನು ಪಡೆದೆ. ಈ ಸಂದೇಶ ನನ್ನನ್ನು ಪ್ರಭಾವಿತಗೊಳಿಸಿದೆ. ಪ್ರೀತಿ ಎಲ್ಲರೊಡನೆ, ಯಾರೊಂದಿಗೂ ಹಗೆಯಿಲ್ಲವೆಂಬ ನಿಮ್ಮ ಧ್ಯೇಯೋಕ್ತಿಯ ಬಗ್ಗೆ ನನಗೆ ಗೊತ್ತಿತ್ತು. ಆದರೆ ನಿಮ್ಮನ್ನು ನೋಡಿ ಅದರಲ್ಲಿ ಇನ್ನಷ್ಟು ವಿಶ್ವಾಸ ಉಂಟಾಗಿದೆ.

ಅನೇಕ ಸಂಗತಿಗಳು ನನ್ನನ್ನು ಪ್ರಭಾವಿತಗೊಳಿಸಿವೆ. ಎಲ್ಲ ಧರ್ಮಗಳ ಸಂರಕ್ಷಣೆ ಮಾಡುವ ಗ್ರಂಥ ಪವಿತ್ರ ಖುರ್‌ಆನ್ ಆಗಿದೆ ಎಂದು ಜಮಾಅತಿನ ಇಮಾಂ ಹೇಳಿದ ಮಾತು ನನಗೆ ಹೊಸ ಮಾಹಿತಿಯಾಗಿದೆ. ನನಗೆ ಇದರ ಬಗ್ಗೆ ಮೊದಲು ಗೊತ್ತಿರಲಿಲ್ಲ.

ಮತ್ತೊರ್ವ ಭಾರತೀಯ ಪ್ರೊಫೆಸರ್ ಶೋಬನಾ ಶಂಕರ್ ಸಾಹಿಬ, ಅವರು ನನ್ನನ್ನೂ ಭೇಟಿಯಾದರು, ಅವರು ಸ್ಟೇಟ್ ಯೂನಿವರ್ಸಿಟಿ ಆಫ್ ನ್ಯೂಯಾರ್ಕ್‌ನಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ. ಅಬ್ದುಸ್ ಸಲಾಂ ಸಂಶೋಧನಾ ಕೇಂದ್ರವು ಇಟಲಿಯಿಂದಲೂ ಸಂಶೋಧನೆ ಮಾಡಿದ್ದಾರೆ. ಘಾನಾದಲ್ಲಿಯೂ ಕೆಲಕಾಲ ಇದ್ದಾರು. ನೀವು ಘಾನಾದಲ್ಲಿ ತಂಗಿದ್ದೀರಿ ಮತ್ತು ನಿಮ್ಮ ಕೆಲಸವು ಸಹ ಜೀವಂತವಾಗಿದೆ ಎಂದು ಅವರು

ವ್ಯಕ್ತಪಡಿಸಿದರು. ಇದು ಇವರು ಮಾತು ಮಾತಲ್ಲೇ ಹೇಳಿದ್ದು. ಅಹ್ಮದೀಯ ಬಾಲಕಿಯರ ಶಾಲೆಯಲ್ಲಿ ಶಿಕ್ಷಣ ಪಡೆದ ಆಫ್ರಿಕಾದ ಹಲವಾರು ಪ್ರಾಧ್ಯಾಪಕರೊಂದಿಗೆ ಮಾತನಾಡಿದ್ದೇನೆ ಎಂದು ಪ್ರಾಧ್ಯಾಪಕರು ಹೇಳಿದರು. ಹೆಣ್ಣುಮಕ್ಕಳಿಗೆ ಇವು ಅತ್ಯುತ್ತಮ ಶಾಲೆಗಳಾಗಿವೆ. ಅವರು ಆಫ್ರಿಕಾದಲ್ಲಿ ಜಮಾಅತ್‌ನ ಶೈಕ್ಷಣಿಕ ಸೇವೆಗಳು ಮತ್ತು ಇತಿಹಾಸವನ್ನು ಹೈಲೈಟ್ ಮಾಡಲು ಬಯಸುತ್ತಾರೆ ಮತ್ತು ಪಶ್ಚಿಮ ಆಫ್ರಿಕಾದ ಅಹ್ಮದಿಗಳ ಬಗ್ಗೆ ಪುಸ್ತಕವನ್ನು ಬರೆಯಲು ಬಯಸುತ್ತಾರೆ. ಸ್ಥಳೀಯ ಭಾಷೆ ಮತ್ತು ಭಾಷಾಂತರಕಾರರನ್ನು ಬಳಸುವಲ್ಲಿ ನಮಗೆ ಜಮಾಅತ್ತಿನ ಬೆಂಬಲ ಬೇಕು ಎಂದು ಪ್ರಾಧ್ಯಾಪಕರು ಹೇಳಿದರು, ಆದ್ದರಿಂದ ನಾನು ಅವರಿಗೆ ಹೇಳಿದ್ದೇನೆ, ಇನ್‌ಶಾಅಲ್ಲಾಹ್, ನಾವು ಸಹಾಯ ಮಾಡುತ್ತೇವೆ ಮತ್ತು ನಾನು ಹೇಳಿದೆ ನೀವು ಘಾನಾ ಹೊರತುಪಡಿಸಿ ಉಳಿದ ದೇಶಗಳನ್ನು ಸಹ ಸೇರಿಸಿಕೊಳ್ಳಬೇಕು.

ಡೇಲಾಸ್‌ನಲ್ಲೂ ಬೈತುಲ್ ಇಕ್ರಾಮ್ ಮಸೀದಿಯ ಉದ್ಘಾಟನೆ ನಡೆದಿತು. ಅದರಲ್ಲಿ 140 ಮುಸ್ಲಿಮೇತರರು ಮತ್ತು ಅಹ್ಮದಿಯೇತರ ಅತಿಥಿಗಳು ಭಾಗವಹಿಸಿದ್ದರು. ಅವರಲ್ಲಿ ರಾಜಕೀಯ ನೇತಾರರು, ಡಾಕ್ಟರ್‌ಗಳು, ಪ್ರೊಫೆಸರ್‌ಗಳು, ಟೀಚರರು, ವಕೀಲರು, ಇಂಜೀನಿಯರ್‌ಗಳು ಮತ್ತು ವಿವಿಧ ವಿಭಾಗಗಳ ಅತಿಥಿಗಳು ಇದ್ದರು.

ಎಲನ್ ಪಟ್ಟಣದ ಕೀಲಿಗೈಯನ್ನು ಸಮರ್ಪಿಸಿದ ಸಿಟಿ ಕೌನ್ಸಿಲ್ ಮೆಂಬರ್ ಹೀಗೆ ಹೇಳಿದರು: ಇಂದು ಬೈತುಲ್ ಇಕ್ರಾಂ ಮಸೀದಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದು ಒಂದು ಹಿರಿದಾದ ಗೌರವದ ಮಾತಾಗಿದೆ. ನಾನು ಅಹ್ಮದಿಯಾ ಜಮಾಅತಿಗೆ ಅದಕ್ಕಾಗಿ ಶುಭಾಶಯಗಳನ್ನು ಕೋರುತ್ತೇನೆ. ಮೇಯರ್ ನನಗೆ ಎರಡು ದಿವಸ ಮುಂಚೆ ಭೇಟಿಯಾಗಿದ್ದರು. ಮಸೀದಿಗೆ ಬಂದಿದ್ದರು ಅವರು ಬಂದು ಭೇಟಿಯಾಗಿ ನಾನು ಹೊರ ರಾಷ್ಟ್ರಕ್ಕೆ ತೆರಳುತ್ತಿದ್ದೇನೆ ಆದ್ದರಿಂದ ನಾನು ಸ್ವತಃ ಆಗಮಿಸಲು ಸಾಧ್ಯವಿಲ್ಲ ನಾನು ನನ್ನ ಪ್ರತಿನಿಧಿಯನ್ನು ಕಳುಹಿಸುತ್ತೇನೆ ಎಂದು ವಿಷಾಧ ಪಡಿಸುತ್ತ ಹೇಳಿದರು. ಆ ಮೇಯರ್ ಸಾಹೇಬರು ಸಹ ಬಹಳ ಉತ್ತಮ ಸ್ವಭಾವದವರಾಗಿದ್ದರು.

ತದನಂತರ ಮೇಯರ್ ಸಾಹಿಬ್ ಅವರ ಪ್ರತಿನಿಧಿಯು ಹೇಳುತ್ತಾರೆ: ಈ ಪಟ್ಟಣದ ನಿರ್ಗತಿಕರನ್ನು ಸಹಾಯ ಮಾಡುವ ಅಹ್ಮದಿಯಾ ಜಮಾಅತಿನ ಸೇವೆಗಳನ್ನು ನಾವು ಪ್ರಶಂಸಿಸುತ್ತೇವೆ. ಶಾಂತಿಪ್ರಿಯ ಮತ್ತು ಮನುಕುಲದ ಸೇವೆ ಮಾಡುವ ಕಮ್ಯೂನಿಟಿಯು ಇಲ್ಲಿ ಮಸೀದಿಯನ್ನು ನಿರ್ಮಿಸಿದೆ ಎಂಬುದು ಈ ಪಟ್ಟಣದ ಸೌಭಾಗ್ಯವಾಗಿದೆ. ಈ ಮಸೀದಿಯು ಈ ಪಟ್ಟಣ ಮತ್ತು ಈ ಪ್ರದೇಶಗಳಿಗೆ ಆಶಾಕಿರಣವಾಗಲಿ ಎಂದು ನಾನು ಬಯಸುತ್ತೇನೆ.

ನನ್ನ ಆಸೆ ಏನೆಂದರೆ ಈ ಮಸೀದಿಯು ಕೇವಲ ಈ ಪಟ್ಟಣಕ್ಕಲ್ಲದೆ ಈ ಸಂಪೂರ್ಣ ಪ್ರದೇಶಕ್ಕೆ ಒಂದು ದಾರಿ ದೀಪ ಆಗಬೇಕು. ಎಲನ್ ಪಟ್ಟಣವು ಸಹ ಡಲ್ಲಾಸ್ ಪಟ್ಟಣಕ್ಕೆ ಸಮೀಪವಿದೆ. ಈಗ ಇದು ಅದರ ಒಂದು ಭಾಗವೇ ಆಗಿದೆ. ಕೊನೆಯಲ್ಲಿ ಅವರು ಎಲನ್ ಪಟ್ಟಣದ ಕೌನ್ಸಿಲ್ ಕಡೆಯಿಂದ ಕೀಲಿಗೈಯನ್ನು ಪ್ರಸ್ತಾಪಿಸಿದರು.

ಸದರ್ನ್ ಯೂನಿವರ್ಸಿಟಿಯ ಪ್ರೊಫೆಸರ್ ಡಾಕ್ಟರ್ ರಾಬಟ್ ಹಂಟ್‌ರನ್ನು ಈ ಸಮಾರಂಭಕ್ಕೆ ಆಮಂತ್ರಿಸದಕ್ಕಾಗಿ ಅವರು ಕೃತಜ್ಞತೆ ಅರ್ಪಿಸಿದರು ಮತ್ತು ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಂ ಎರಡು ಗುಣಗಳನ್ನು ಬೆಂಬಲಿಸಲು ಪ್ರಯತ್ನಿಸುತ್ತಾರೆ. ಒಂದು ಧಾರ್ಮಿಕ ಸ್ವಾತಂತ್ರ್ಯ, ಎರಡು ಧರ್ಮಗಳ ಅನ್ಯೋನ್ಯ ಮಾತುಕತೆ.

ಈ ಎರಡು ಗುಣಗಳು ನಿಕಟ ಸಂಬಂಧ ಹೊಂದಿವೆ ಏಕೆಂದರೆ ಧರ್ಮಗಳಲ್ಲಿ ಪರಸ್ಪರ ತಿಳುವಳಿಕೆ ಮತ್ತು ಪರಸ್ಪರ ಗೌರವವಿಲ್ಲದಿದ್ದರೆ, ವಿಭಜನೆಯ ಧ್ವನಿ ಬಲಗೊಳ್ಳುತ್ತದೆ ಮತ್ತು ನನ್ನ ವಯಸ್ಕ ಜೀವನದ ಅರ್ಧದಷ್ಟು ಅಂತಹ ದೇಶಗಳಲ್ಲಿ ಕಳೆದಿದೆ ಎಂಬ ಆಧಾರದ ಮೇಲೆ ನಾನು ಇದನ್ನು ಹೇಳುತ್ತೇನೆ. ನಾನು ಧಾರ್ಮಿಕ ಅಲ್ಪಸಂಖ್ಯಾತರಲ್ಲಿದ್ದೆ. ನಂತರ ಮಾತನಾಡಿದ ಅವರು ಹೇಳಿದರು: ಅಹ್ಮದಿಯಾ ಜಮಾಅತ್ ದಬ್ಬಾಳಿಕೆಗೆ ಒಳಗಾಗಿದೆ ಎಂಬುದಕ್ಕೆ ಇತಿಹಾಸ ಸಾಕ್ಷಿಯಾಗಿದೆ ಮತ್ತು ಅದಕ್ಕಾಗಿಯೇ ಈ ಜಮಾಅತ್ ಧಾರ್ಮಿಕ ಸ್ವಾತಂತ್ರ್ಯದ ಪ್ರಯತ್ನಗಳಲ್ಲಿ ಮುಂಚೂಣಿಯಲ್ಲಿದೆ ಮತ್ತು ನಾವು ಪರಸ್ಪರ ಗೌರವ ಮತ್ತು ಮುಕ್ತ ಮನಸ್ಸಿನಿಂದ ವರ್ತಿಸುವವರೆಗೆ ನಾವು ವಿಭಜನೆಯನ್ನು ನಿಯಂತ್ರಿಸಲು ಮತ್ತು ಸಮಾಜದಿಂದ ನಕಾರಾತ್ಮಕ ಆಲೋಚನೆಗಳನ್ನು ತೊಡೆದುಹಾಕಲು ಸಾಧ್ಯವಿಲ್ಲ.

ನಂತರ ರಿಪಬ್ಲಿಕನ್ ಕಾಂಗ್ರೆಸ್‌ಮೆನ್ ಗೌರವಾನ್ವಿತ ಮೈಕೆಲ್ ಮೆಕ್ಕಾಲ್ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು. ಪ್ರಪಂಚದ ಮೂರು ಧರ್ಮಗಳಾದ ಯಹೂದಿಗಳು, ಕ್ರಿಶ್ಚಿಯಾನಿಟಿ ಮತ್ತು ಇಸ್ಲಾಂ ಧರ್ಮಗಳು ತಮ್ಮ ಇತಿಹಾಸವನ್ನು ಹಝ್ರತ್ ಇಬ್ರಾಹಿಂ ಅಲೈಹಿಸ್ಸಲಾಮ್ ಅವರಿಂದ ಗುರುತಿಸುತ್ತಾರೆ ಮತ್ತು ಹಝ್ರತ್ ಇಬ್ರಾಹೀಮ್ ಅಲೈಹಿಸ್ಸಲಾಮ್ ಅವರಿಗೆ ಸಂಬಂಧಿಸಿದ ಈ ಮೂರು ಧರ್ಮಗಳು ಶಾಂತಿಯಿಂದ ಬದುಕಬಲ್ಲವು ಎಂದು ಅವರು ನನಗೆ ತಿಳಿಸಿದರು. ಇದನ್ನು ಅಹ್ಮದಿಯಾ ಜಮಾಅತ್‌ಗಿಂತ ಹೆಚ್ಚು ಯಾರು ಅನುಭವಿಸಬಹುದು? ಮತ್ತೆ ಅವರು ಹೇಳಿದರು, ನಾನು ಜಮಾಅತ್‌ನ ಇಮಾಮ್‌ರೊಂದಿಗೆ ಯೇಸುವಿನ ಬಗ್ಗೆ ಮತ್ತು 'ನ್ಯು ಟೆಸ್ಟಮೆಂಟ್' ಮತ್ತು 'ಇಂಜೀಲ್'ನ ಬಗ್ಗೆ ಅಹ್ಮದಿಯಾ ಜಮಾಅತ್‌ನ ಬೋಧನೆಗಳ ಬಗ್ಗೆ ಮಾತನಾಡಲು ನನಗೆ ಅವಕಾಶ ಸಿಕ್ಕಿತು. ಅವರೊಂದಿಗೆ ಮಾತನಾಡುತ್ತಿದ್ದಾಗ ಮತ್ತು "ಮಸೀಹ್ ಹಿಂದುಸ್ತಾನ್ ಮೇ" ಪುಸ್ತಕವೂ ಅವರ ಬಳಿ ಇತ್ತು, ನಾನು ಅದರಲ್ಲಿ ಅರ್ಧದಷ್ಟು ಓದಿದ್ದೇನೆ ಮತ್ತು ಓದುತ್ತಿದ್ದೇನೆ ಎಂದು ಅವರು ಹೇಳುತ್ತಾರೆ. ತುಂಬಾ ಆಸಕ್ತಿದಾಯಕ ಮತ್ತು ಹೆಚ್ಚಿನ ಸಂಶೋಧನೆ ಮಾಡುತ್ತೇನೆ ಮತ್ತು ಈ ಪುಸ್ತಕದಿಂದ ನಾನು ಯೇಸುವಿನ ಬಗ್ಗೆ ಅನೇಕ ಹೊಸ ವಿಷಯಗಳನ್ನು ತಿಳಿದುಕೊಳ್ಳುತ್ತಿದ್ದೇನೆ ಎಂದು ಅವರು ಹೇಳುತ್ತಾರೆ. ಉತ್ತಮ ಶಿಕ್ಷಣ ಮತ್ತು ಧರ್ಮದಲ್ಲಿ ಆಸಕ್ತಿವುಳ್ಳವರಾಗಿದ್ದಾರೆ. ಆದರೆ, ನ್ಯು ಟೆಸ್ಟಮೆಂಟ್ ಹಾಗೂ ಇಂಜೀಲಿನ ಬಗ್ಗೆ ಮಾತನಾಡಲು ನನಗೆ ಅವಕಾಶ ಲಭಿಸಿತು ಎಂದು ಅವರು ಹೇಳಿದರು. ಶಾಂತಿ, ದಯೆ ಮತ್ತು ಪ್ರೀತಿಯ ಬಗ್ಗೆ ಅಹ್ಮದೀಯ ಸಮುದಾಯದಿಂದ ನಾವು ಬಹಳಷ್ಟು ಕಲಿಯಬಹುದು ಎಂಬುದರಲ್ಲಿ ಸಂದೇಹವಿಲ್ಲ. ನಾನು ಕ್ಯಾಥೋಲಿಕ್ ಆಗಿ ಬೆಳೆದೆ. ನಾನು ಈಗ US ಕಾಂಗ್ರೆಸ್‌ನಲ್ಲಿ ಅಹ್ಮದೀಯ ಕೂಟದ ಅಧ್ಯಕ್ಷನಾಗಿದ್ದೇನೆ. ನಮ್ಮ ಪಕ್ಷದ ಪರ ಮಾತನಾಡುವವರಾಗಿದ್ದಾರೆ ಇವರು ಈ ಸಮಿತಿಯ ಅಧ್ಯಕ್ಷರಾಗಿದ್ದಾರೆ. ನಂತರ ಅವರು ಹೇಳುತ್ತಾರೆ, ಜಗತ್ತಿನಲ್ಲಿ ಶಾಂತಿಯನ್ನು ಹರಡಲು ಮತ್ತು ರಾಷ್ಟ್ರಗಳ ನಡುವೆ ಏಕತೆ, ಅಹಿಂಸೆ, ಉಗ್ರವಾದವನ್ನು ಕೊನೆಗೊಳಿಸಲು, ಬಡತನವನ್ನು ಕೊನೆಗೊಳಿಸಲು, ಆರ್ಥಿಕ ಸಮಾನತೆ, ಜಾಗತಿಕ ಮಾನವ ಹಕ್ಕುಗಳು ಮತ್ತು ಜಾಗತಿಕ ಧಾರ್ಮಿಕ ಸ್ವಾತಂತ್ರ್ಯವನ್ನು ಸ್ಥಾಪಿಸುವ ನಿಮ್ಮ ಪ್ರಯತ್ನಗಳನ್ನು ನಾನು ವಿಶೇಷವಾಗಿ ಪ್ರಶಂಸಿಸುತ್ತೇನೆ. ನಂತರ ಅನೇಕ ಅಹ್ಮದಿ ಮುಸ್ಲಿಮರನ್ನು ಗುರಿಯಾಗಿಸಿ ಕೊಲ್ಲಲಾಯಿತು ಎಂದು ಅವರು ಹೇಳುತ್ತಾರೆ. ಈ ಕಿರುಕುಳದ ನಿರಂತರ ನಿರೂಪಣೆಯ ಹೊರತಾಗಿಯೂ, ಜಮಾಅತ್‌ನ ಇಮಾಮ್ ಇತರರ ವಿರುದ್ಧ ಪ್ರತೀಕಾರದ ಹಿಂಸೆಯನ್ನು ನಿಷೇಧಿಸಿದರು, ಇದು ಅತ್ಯಂತ ಉದಾತ್ತ ಕಾರ್ಯವಾಗಿದೆ.

ನಂತರ ಇಮಾಮ್ ಜಮಾಅತ್ ಅವರು ವಿಶ್ವದ ನಾಯಕರಿಗೆ ನೈಜ ಮತ್ತು ಶಾಶ್ವತ ಶಾಂತಿಗಾಗಿ ನ್ಯಾಯದ ಅಗತ್ಯವಿದೆ ಎಂದು ಪದೇ ಪದೇ ವಿವರಿಸಿದ್ದಾರೆ ಎಂದು ಅವರು ಹೇಳುತ್ತಾರೆ. ತುಳಿತಕ್ಕೊಳಗಾದ ರಾಷ್ಟ್ರಗಳ ಹಕ್ಕುಗಳಿಗಾಗಿ ಧ್ವನಿ ಎತ್ತಿದರು. ಅಂತಹ ಅಭಿಪ್ರಾಯಗಳನ್ನು ಅವರು ವ್ಯಕ್ತಪಡಿಸಿದ್ದಾರೆ. ಸಾಕಷ್ಟು ಉದ್ದವಾದ ಅಭಿವ್ಯಕ್ತಿಗಳಿವೆ.

ಅತಿಥಿಯಾದ ಟಾಮ್ ಬೆರ್ರಿ ಅವರು ಹೇಳುತ್ತಾರೆ: ನಾನು ಇಮಾಮ್‌ಗೆ ಧನ್ಯವಾದ ಹೇಳಲು ಬಯಸುತ್ತೇನೆ. ಅವರ ಸಂದೇಶ, ಆತಿಥ್ಯ, ಸಂವಾದ ಎಲ್ಲವೂ ತುಂಬಾ ಚೆನ್ನಾಗಿತ್ತು. ನಿಸ್ಸಂದೇಹವಾಗಿ, ಧರ್ಮ ಅಥವಾ ಧರ್ಮವನ್ನು ಲೆಕ್ಕಿಸದೆ ಪರಸ್ಪರರ ಹೆಚ್ಚಿನ ಒಳಿತಿಗಾಗಿ ಕೆಲಸ ಮಾಡುವುದು ಒಂದು ಅನುಗ್ರಹವಾಗಿದೆ. ಜೀವನಕ್ಕೆ ಮೌಲ್ಯವಿದೆ. ಜೀವನದೊಂದಿಗೆ ಪ್ರೀತಿಸಬೇಕು, ಜನರನ್ನು ಗೌರವಿಸಬೇಕು, ಜನರನ್ನು ಪ್ರೀತಿಸಬೇಕು, ಅಂತಹ ಸಮಾಜದಲ್ಲಿ ಯಾವುದೇ ಒಬ್ಬ ವ್ಯಕ್ತಿ ಅಥವಾ ಸಂಸ್ಥೆಯ ಏಕಸ್ವಾಮ್ಯವಿಲ್ಲ ಎಂದು ತೋರಿಸುತ್ತದೆ. ಎಲ್ಲರೂ ಒಗ್ಗಟ್ಟಾಗಿ ಕೆಲಸ ಮಾಡಬೇಕು. ಇದು ಖಲೀಫರ ಸಂದೇಶವಾಗಿತ್ತು. ಈ ಸಂದೇಶವನ್ನು ಪ್ರತಿದಿನ ಮಲಗುವ ಮೊದಲು ಮತ್ತು ಬೆಳಿಗ್ಗೆ ಎದ್ದ ನಂತರ ಮತ್ತು ಅದೇ ಸಂದೇಶವನ್ನು ಹರಡಬೇಕು. ಇದು ನಾವು ನಮ್ಮ ಮಕ್ಕಳಿಗೆ ತಿಳಿಸಬೇಕಾದ ಸಂದೇಶವಾಗಿದ್ದು, ನಾವು ಹೋದ ನಂತರ ಅವರು ಈ ಸಂದೇಶವನ್ನು ಮುಂದುವರಿಸಬೇಕು. ನಾನು ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಒಬ್ಬ ಮುಸ್ಲಿಂ ಅತಿಥಿಯಾದ ಸುಲ್ತಾನ್ ಚೌಧರಿ ಸಾಹಿಬ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತಿನ ಇಮಾಂ ಲೋಕಕ್ಕೆ ಶಾಂತಿಯ ಒಂದು ಅತ್ಯುತ್ತಮ ಸಂದೇಶವನ್ನು ನೀಡಿರುವರು.

ನಾರ್ಥ್ ಚರ್ಚ್ ಸೆಬಟೇರಿಯನ್‌ನಿಂದ ಬಂದ ಅತಿಥಿ ಹೇಳುತ್ತಾರೆ: ಖಲೀಫರನ್ನು ನೋಡಿ, ಅವರ ಮಾತುಗಳನ್ನು ಕೇಳಿ ಬಹಳ ನೆಮ್ಮದಿ ಲಭಿಸಿದೆ. ಜಾಗತಿಕ ಶಾಂತಿಗಾಗಿ ಈ ರೀತಿಯಾಗಿ ಪ್ರಯತ್ನ ಮಾಡುವ ಯಾರನ್ನೂ ನಾನು ಕಂಡಿಲ್ಲ. ಬಹಳ ಉತ್ತಮ ಅನುಭವವಾಗಿತ್ತು. ಜನರು ಸ್ವಾರ್ಥಕ್ಕೆ ಬದಲಾಗಿ, ಇನ್ನೊಬ್ಬರ ಮೇಲೆ ಮೇಲುಗೈ ಸಾಧಿಸುವುದಕ್ಕೆ ಬದಲಾಗಿ, ಇತರರ ಪ್ರದೇಶಗಳನ್ನು ವಶಪಡಿಸಲು ಅಥವಾ ದೌರ್ಜನ್ಯ ಮಾಡುವ ಅಜೆಂಡ ಮಾಡುವುದಕ್ಕೆ ಬದಲಾಗಿ ಈ ಸಂದೇಶವನ್ನು ಆಲಿಸಿದರೆ, ಲೋಕದಲ್ಲಿ ಶಾಂತಿ ಸ್ಥಾಪನೆಯಾಗುವುದು. ಶಾಂತಿಯನ್ನು ಬೆಂಬಲಿಸುವ ಇನ್ನಷ್ಟು ಭಾಷಣಗಳನ್ನು ನಮಗೆ ಆಲಿಸಲು ಸಾಧ್ಯವಾದರೆ ಎಷ್ಟು ಚೆನ್ನ.

ಕಾಲಿನ್ ಕೌಂಟಿ ಪೊಲೀಸ್ ಇಲಾಖೆಯ ಒಬ್ಬ ವ್ಯಕ್ತಿ, ಶ್ರೀ. ಲೆರಾಯ್ ಸಾಹಿಬ್ ಕೂಡ ಆಗಮಿಸಿದ್ದರು. ಇದೊಂದು ಸುಂದರ ಕಾರ್ಯಕ್ರಮವಾಗಿದ್ದು, ಇದರಿಂದ ನಾನು ಸಾಕಷ್ಟು ಕಲಿತಿದ್ದೇನೆ ಎಂದು ಹೇಳುತ್ತಾರೆ. ಅಹ್ಮದೀಯ ಮುಸ್ಲಿಂ ಸಮುದಾಯ ನಿಜಕ್ಕೂ ಅದ್ಭುತ ಕೆಲಸ ಮಾಡಿದೆ.

ಒಬ್ಬ ಮುಸ್ಲಿಂ ಅತಿಥಿಯಾದ ಡಾಕ್ಟರ್ ಹಲೀಮುರ್ರಹ್ಮಾನ್ ಸಾಹಿಬ್ ಹೀಗೆ ಹೇಳಿದರು: ಈ ಸಮಾರಂಭದ ಏರ್ಪಾಡು ಮತ್ತು ಅತಿಥಿ ಸತ್ಕಾರ ಅದ್ಭುತವಾಗಿತ್ತು. ನನಗೆ ನೀಡಲಾದ ಗೌರವಕ್ಕೆ ನಾನು ಅರ್ಹನಾಗಿರಲಿಲ್ಲ. ಈ ಎಲ್ಲ ವಾತಾವರಣವನ್ನು ಮತ್ತು ನೀವು ನೀಡಿದ ಗೌರವದಿಂದ ನನ್ನ ಕಣ್ಣುಗಳು ತೇವಗೊಂಡಿವೆ. ಇಸ್ಲಾಮಿನ ನೈಜ ಪಾಠಗಳನ್ನು ಪಾಲಿಸುವ ಅತ್ಯುತ್ತಮ ಜನರ ನಡುವೆ ಸಮಯ ಕಳೆಯಲು ನನಗೆ ಸಂದರ್ಭ ಸಿಕ್ಕಿತು.

ಅಬ್ಬಿ ಕಿರ್ಕೆಂಡಾಲ್ ಎಂಬ ಅತಿಥಿಯೋರ್ವರು ಹೇಳುತ್ತಾರೆ: ನಾನು ಧಾರ್ಮಿಕ ಗುಂಪನ್ನು ನೋಡಿದ್ದೇನೆ, ಅವರ ಆರಾಧನೆಯ ವಿಧಾನವು ನಮ್ಮದಕ್ಕಿಂತ ಭಿನ್ನವಾಗಿದೆ, ಆದರೆ ನಮ್ಮ ಮೌಲ್ಯಗಳು ಒಂದೇ ಆಗಿರುತ್ತವೆ. ಅದೊಂದು ಅದ್ಭುತ ಅನುಭವ ನನಗೆ. ಎಲ್ಲಾ ಸಮುದಾಯಗಳು ಮೈಗೂಡಿಸಿಕೊಳ್ಳಬೇಕಾದ ಮೌಲ್ಯಗಳ ಬಗ್ಗೆ ಧಾರ್ಮಿಕ ಮುಖಂಡರಾದ ಇಮಾಮ್‌ಗಳು ಮಾತನಾಡುವುದನ್ನು ನೋಡುವುದು ನನಗೆ ಹೆಮ್ಮೆಯ ವಿಷಯವಾಗಿತ್ತು. ನಂತರ ಅವರು ಹೇಳಿದರು: ಇಲ್ಲಿಗೆ ಬಂದ ನಂತರ, ನಾನು ದೇವರ ಉಪಸ್ಥಿತಿಯನ್ನು ಅನುಭವಿಸಿದೆ ಮತ್ತು ನಂಬಿಕೆಗಳನ್ನು ಲೆಕ್ಕಿಸದೆ, ನೀವು ಎಲ್ಲಿ ದೇವರ ಉಪಸ್ಥಿತಿಯನ್ನು ಅನುಭವಿಸುತ್ತೀರೋ, ನಿಮಗೆ ಶಾಂತಿ ಮತ್ತು ನೆಮ್ಮದಿ ಲಭಿಸುತ್ತದೆ, ಇಂದು ಇಲ್ಲಿ ಎಲ್ಲಾ ಜನರು ಧರ್ಮ, ಸಮುದಾಯ ಮತ್ತು ರಾಷ್ಟ್ರದ ಭೇದಭಾವವಿಲ್ಲದೆ. ಎಲ್ಲಾ ಸಮುದಾಯಗಳಿಗೆ ಅಗತ್ಯವಿದೆ.

ಒಬ್ಬ ಮಹಿಳೆಯಾದ ವಿಕ್ಟೋರಿಯ ಸಾಹಿಬ್ ಹೇಳುತ್ತಾರೆ: ನನಗೆ ಇಲ್ಲಿ ಅತ್ಯಂತ ವಿಶಿಷ್ಟ ಸಂಗತಿ ಅಹ್ಮದಿಯಾ ಜಮಾಅತಿನ ನೇತಾರರ ಭಾಷಣವಾಗಿತ್ತು. ಧಾರ್ಮಿಕ ಭಿನ್ನತೆ ಮತ್ತು ವಿವಿಧ ದೃಷ್ಟಿಕೋನಗಳಿದ್ದರೂ ನಾವೆಲ್ಲರೂ ಪರಸ್ಪರ ಹೊಂದಿಕೊಂಡಿದ್ದೇವೆ ಎಂದು ಅವರು ಹೇಳಿದ್ದರು. ಧರ್ಮಗಳ ನಡುವೆ ಮಾತುಕತೆಯಲ್ಲಿ ಇದರ ಕೊರತೆಯನ್ನು ಕಾಣಬಹುದಾಗಿದೆ.

ಮಹಿಳೆ ಅತಿಥಿಯೂ ಈ ಮಸೀದಿಯ ನೆರೆಯವರೂ ಆದ ಮೇರಿ ಮಾರ್ಕ್‌ಡರ್‌ಮಟ್‌ರಿಗೆ ಬಹಳ ದೊಡ್ಡ ಭೂಸ್ವತ್ತು ಇದೆ ಮತ್ತು ಅವರು ಪಾರ್ಕಿಂಗಿಗಾಗಿ ಸ್ಥಳವನ್ನು ಸಹ ನೀಡಿದ್ದರು. ಅವರು ಹೇಳುತ್ತಾರೆ: ಇಂದು ಈ ಪ್ರೋಗ್ರಾಮಿಗಾಗಿ ಜಾಗವನ್ನು ಕೊಟ್ಟದ್ದರಿಂದ ನನಗೆ ಉಂಟಾದ ಸಂತೋಷದಷ್ಟು ಈ ಧೂಳು ತುಂಬಿದ ಭೂಸ್ವತ್ತಿನ ಕಾರಣದಿಂದ ನನಗೆ ಹಿಂದೆಂದೂ ಸಂತೋಷ ಉಂಟಾಗಿರಲಿಲ್ಲ. ಬಹಳ ಸಭ್ಯ ಮತ್ತು ಉನ್ನತ ನೈತಿಕಗುಣವನ್ನು ಹೊಂದಿದ್ದ ಮಹಿಳೆಯಾಗಿದ್ದಳು. ತನ್ನ ಜಾಗವನ್ನು ಶುಚಿಗೊಳಿಸಿ ಲೆವಲ್ ಮಾಡಿ ಕೊಟ್ಟಿದ್ದರು.

ಮೊದಲೇ ನಾನು ಪ್ರಸ್ತಾಪಿಸಿದ ಬೆವರ್ಲಿ ಮೆಕ್‌ಕಾರ್ಡ್ ಎಂಬ ಮಹಿಳೆ ಇದ್ದರು. ಅವರು ಹೇಳುತ್ತಾರೆ: "ಶಾಂತಿ, ಸಾಮರಸ್ಯ ಮತ್ತು ಪ್ರೀತಿಯ ಅಗತ್ಯಕ್ಕೆ ಜನರನ್ನು ನಿರಂತರವಾಗಿ ಕರೆಯುವ ವಿಶ್ವ ಧಾರ್ಮಿಕ ನಾಯಕರನ್ನು ಕೇಳಲು ನಾನು ಯಾವಾಗಲೂ ಉತ್ಸುಕಳಾಗಿರುತ್ತೇನೆ. ಅಂತಹ ಸಂದೇಶವನ್ನು ಕೇಳಲು ನಾನು ಯಾವಾಗಲೂ ಸಂತೋಷಪಡುತ್ತೇನೆ.

ನನಗೆ ವೈಯಕ್ತಿಕವಾಗಿ ಈ ಜಮಾಅತ್‌ನ ಬಗ್ಗೆ ಯಾವುದೇ ಭಯವಿಲ್ಲ ಮತ್ತು ಇತರರು ಭಯಪಡಲು ಯಾವುದೇ ಕಾರಣವನ್ನು ನಾನು ಕಾಣುವುದಿಲ್ಲ ಏಕೆಂದರೆ ಈ ಜಮಾಅತ್ ತುಂಬಾ ಪ್ರೀತಿಸುವ, ಸೂಕ್ಷ್ಮ ಮತ್ತು ಯಾವಾಗಲೂ ಸೇವೆ ಸಲ್ಲಿಸುವ ಜಮಾಅತ್ ಆಗಿದೆ. ಈ ಜಮಾಅತ್‌ನ ಸೃಷ್ಟಿ ಸೇವಾ ಹಾಗೂ ಕಲ್ಯಾಣ ಕಾರ್ಯಗಳನ್ನು ನೋಡಿದ ನಂತರ ಯಾರಿಗಾದರೂ ಯಾವುದೇ ಭಯವಿದ್ದರೂ ಅದು ತಕ್ಷಣವೇ ದೂರವಾಗುತ್ತದೆ.

ಮತ್ತೊರ್ವ ಅತಿಥಿ ಜೊಶೂವ ಎಂಬವರಿದ್ದರು. ಅವರು ಹೇಳುತ್ತಾರೆ ಇಂದಿನ ಉದ್ಘಾಟನಾ ಸಮಾರಂಭದಲ್ಲಿ ನನಗೆ ಮತ್ತು ಇತರ ಹಿರಿಯ ಧರ್ಮಗುರುಗಳನ್ನು ಸಮಾರಂಭದಲ್ಲಿ ಪಾಲ್ಗೊಳ್ಳುವಂತೆ ಆಹ್ವಾನಿಸಲಾಗಿದೆ ಮತ್ತು ಜನರೊಂದಿಗೆ ಸಂವಹನ ನಡೆಸಲು ಅವಕಾಶವಿದೆ ಎಂದು ಹೇಳಲಾಗಿದೆ. ಶಾಂತಿ, ಏಕತೆ ಮತ್ತು ನ್ಯಾಯವನ್ನು ಇಲ್ಲಿ ಎಷ್ಟು ಬುದ್ಧಿವಂತಿಕೆಯಿಂದ ಚರ್ಚಿಸಲಾಗಿದೆ ಎಂಬುದನ್ನು ನಾನು ನಿಜವಾಗಿಯೂ ಪ್ರಶಂಸಿಸುತ್ತೇನೆ.

ಇದರಿಂದ ನನಗೆ ಅರಿವಾಗಿದ ವಿಷಯ ಎಂದರೆ ವಿವಿಧ ಸಂಸ್ಕೃತಿಗಳು ಮತ್ತು ನಾಗರಿಕತೆಗಳಿಗೆ ಸೇರಿದ ಜನರಿದ್ದಾರೆ ಆದರೆ ಅವರು ನಮ್ಮ ಜೀವನದಲ್ಲಿ ದೇವರ ಉಪಸ್ಥಿತಿಯನ್ನು ಮತ್ತು ಮನುಷ್ಯರಲ್ಲಿ ಪರಸ್ಪರ ಸಹಾನುಭೂತಿಯನ್ನು ಪ್ರಚಾರ ಮಾಡುತ್ತಾರೆ ಮತ್ತು ನಮ್ಮ ಕ್ರಿಯೆಗಳು ಪರಸ್ಪರ ಪರಿಣಾಮ ಬೀರುತ್ತವೆ, ಆದ್ದರಿಂದ ಒಟ್ಟಿಗೆ ಕುಳಿತುಕೊಳ್ಳುವುದು, ಊಟ ಮಾಡುವುದು ಮತ್ತು ಮಾತನಾಡುವುದು ಅವಶ್ಯಕವಾಗಿದೆ. ಇಲ್ಲಿನ ಆತಿಥ್ಯ ತುಂಬಾ ಚೆನ್ನಾಗಿತ್ತು ಎಂದು ನನ್ನ ಹೆಂಡತಿಗೆ ಹೇಳುತ್ತಿದ್ದೆ. ಇಲ್ಲಿಗೆ ಬಂದ ಕೂಡಲೇ ಎಲ್ಲವೂ ವ್ಯವಸ್ಥಿತವಾದಂತೆ ತೋರಿತು.

ಡೀಲಾಸ್‌ನಿಂದ ಐವತ್ತು ಐವತ್ತೈದು ಮೈಲುಗಳ ದೂರದ ಒಂದು ಪ್ರದೇಶವಾದ ಫೋರ್ಟ್‌ವರ್ಥ್‌ನಲ್ಲಿ ನಾಲ್ಕು ಮುಕ್ಕಾಲು ಎಕರೆ ಭೂಪ್ರದೇಶದಲ್ಲಿ ಒಂದು ಕಟ್ಟಡವನ್ನು ಖರೀದಿ ಮಾಡಲಾಗಿತ್ತು. ಅದಕ್ಕೆ ಮಸೀದಿಯ ರೂಪವನ್ನು ನೀಡಲಿಕ್ಕಾಗಿ ಅಲ್ಲಿ ಒಂದು ಗುಮ್ಮಟ ಮತ್ತು ಎರಡು ಮೀನಾರಗಳನ್ನು ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಅದು ಉತ್ತಮವಾದ ಒಂದು ಪ್ರದೇಶವಾಗಿದೆ. ಜಮಾಅತಿನ ಜನರು ಅಲ್ಲಿ ನಮಾಝ್‌ಗಳನ್ನು ಸಹ ನಿರ್ವಹಿಸುತ್ತಾರೆ. ನನಗೂ ಅಲ್ಲಿ ಮಗ್‌ರಿಬ್ ಮತ್ತು ಇಶಾ ನಮಾಝಿನ ಇಮಾಮತ್ ವಹಿಸಲು ಸಂದರ್ಭ ಸಿಕ್ಕಿತು.

ಫೋರ್ಟ್ ವರ್ತ್‌ನಲ್ಲಿ ನೆಲೆಸಿರುವ ಒಬ್ಬ ಅತಿಥಿಯಾದ ಏಬೆ ಕರ್ಕ್ ಸಾಹಿಬ್‌ರು ಡಲಾಸ್‌ಗೆ ಮಸೀದಿಯ ಉದ್ಘಾಟನೆಗಾಗಿ ಬಂದಿದ್ದರು. ಅವರು ಹೇಳುತ್ತಾರೆ: ಜಮಾಅತಿನ ಇಮಾಮರು ಅಲ್ಲಾಹನ ಇಂಗಿತ ಪ್ರಕಾರ ಪರಸ್ಪರ ಹೊಂದಿಕೊಂಡು ಕೆಲಸ ಮಾಡಬೇಕೆಂಬ ಸಂದೇಶವನ್ನು ಬಹಳ ಉತ್ತಮವಾದ ರೀತಿಯಲ್ಲಿ ನೀಡಿದರು. ಶಾಂತಿಸ್ಥಾಪನೆ ಹಾಗೂ ನ್ಯೂಕ್ಲಿಯರ್ ಯುದ್ಧದಿಂದ ರಕ್ಷಣೆ ಪಡೆಯಲು ನೀಡಲಾದ ಸಂದೇಶಕ್ಕೆ ನಾನು ಪ್ರಾಮುಖ್ಯವನ್ನು ನೀಡುತ್ತೇನೆ.

ಫೋರ್ಟ್‌ವರ್ಥ್‌ನಿಂದಲೇ ಡೀಲಾಸಿಗೆ ಬಂದಿದ್ದ ಒಂದು ಚರ್ಚಿನ ಮೆಂಬರ್ ಹೇಳುತ್ತಾರೆ: ಬಹಳ ವೈಭವಶಾಲಿ ಸಂದೇಶವಾಗಿತ್ತು. ಪ್ರತಿಯೊಬ್ಬರೂ ಖಲೀಫರ ಈ ಸ್ಪಷ್ಟವಾದ ಸಂದೇಶವನ್ನು ಖಂಡಿತ ಆಲಿಸಬೇಕು.

ಹೈಸ್ಕೂಲಿನ ಟೀಚರ್ ಒಬ್ಬಳು ಹೇಳುತ್ತಾಳೆ: ಖಲೀಫರ ಎರಡು ಸಂಗತಿಗಳು ನನ್ನನ್ನು ಬಹಳ ಪ್ರಭಾವಿತಗೊಳಿಸಿವೆ. ಒಂದು, ಸಮಾಜದಲ್ಲಿ ಇಸ್ಲಾಮಿನ ಬಗ್ಗೆ ಅಂಜಿಕೆಯಿದೆ ಎಂದು ಅವರು ಒಪ್ಪಿಕೊಂಡರು. ನಾನು ಈ ಸಂಗತಿಗಳನ್ನು ನನ್ನ ವಿದ್ಯಾರ್ಥಿಗಳಲ್ಲಿ ನೋಡುತ್ತಿರುತ್ತೇನೆ. ನಾನು ಪ್ರಶಂಸಿಸುವ ಎರಡನೇ ಸಂಗತಿಯೇನೆಂದರೆ, ನ್ಯೂಕ್ಲಿಯರ್ ಆಯುಧಗಳನ್ನು ಪ್ರಯೋಗಿಸುವುದರ ವಿರುದ್ಧ ಖಲೀಫರು ಮುನ್ನೆಚ್ಚರಿಕೆ ನೀಡಿದ್ದರು. ಇಂದಿನ ಪರಿಸ್ಥಿತಿಯಲ್ಲಿ ಈ ರೀತಿಯ ವಿವೇಕಯುತ ಸಂದೇಶವನ್ನು ಆಲಿಸಿ ಸಂತೋಷವಾಯಿತು.

ಇದಾಗಿದ್ದುವು ಕೆಲವು ಜನರ ಅನಿಸಿಕೆಗಳು. ಈಗ ಕೆಲವು ಮಾಹಿತಿಗಳನ್ನು ಕೂಡ ಹೇಳುತ್ತೇನೆ. ಝಿಯೋನಿನ ಫತ್‌ಹೇ ಅಝೀಂ ಮಸೀದಿಯಲ್ಲಿ ಡೋಯಿಯ ಮುಬಾಹಿಲಕ್ಕೆ ಸಂಬಂಧಿಸಿ ಒಂದು ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿತ್ತು. ಈ ಮುಬಾಹಿಲದ ಬಗ್ಗೆ ಪ್ರಸ್ತಾಪಿಸಿದ 32 ವಾರ್ತಾಪತ್ರಿಕೆಗಳ ಹೆಸರುಗಳನ್ನು ಮಜ್‌ಮೂಅ ಇಶ್ತಿಹಾರಾತಿನ ಮೂರನೇ ಭಾಗದಲ್ಲಿ ಹಝ್ರತ್ ಮಸೀಹ್ ಮೌಊದ್(ಅ) ಬರೆದಿರುವರು ಮತ್ತು ಹೀಗೆ ಹೇಳಿದ್ದರು: ಇದು ನಮ್ಮ ತನಕ ತಲುಪಿದ ವಾರ್ತಾ ಪತ್ರಿಕೆಗಳಾಗಿವೆ. ನೂರಕ್ಕೆ ಮೇಲ್ಪಟ್ಟು ವಾರ್ತಾಪತ್ರಿಕೆಗಳಲ್ಲಿ ಇದರ ಪ್ರಸ್ತಾಪ ಬಂದಿರಬಹುದು ಎಂದು ಇದರಿಂದ ಗೊತ್ತಾಗುತ್ತದೆ. ಅಮೇರಿಕದ ಅಹ್ಮದಿಯಾ ಜಮಾಅತ್ ಇದರ ಬಗ್ಗೆ ಶೋಧನೆ ನಡೆಸಿದೆ ಮತ್ತು ಇನ್ನಷ್ಟು ವಾರ್ತಾಪತ್ರಿಕೆಗಳಲ್ಲಿ ಬಂದ ಸುದ್ದಿಯನ್ನು ಹುಡುಕಿದೆ. ಹಝ್ರತ್ ಮಸೀಹ್ ಮೌಊದ್(ಅ) ಪ್ರಸ್ತಾಪಿಸಿದ 32 ವಾರ್ತಾಪತ್ರಿಕೆಗಳು ಅಲ್ಲದೆಯೂ ಈ ಮುಬಾಹಿಲದ ಬಗ್ಗೆ ಪ್ರಸ್ತಾಪಿಸಿದ ಹೆಚ್ಚಿನ 128 ವಾರ್ತಾಪತ್ರಿಕೆಗಳು ಲಭಿಸಿವೆ.

ಈ ರೀತಿಯಾಗಿ ಕೇವಲ ಅಮೇರಿಕದಲ್ಲೇ ಒಟ್ಟು 160 ವಾರ್ತಾಪತ್ರಿಕೆಗಳಲ್ಲಿ ಇದರ ಪ್ರಸ್ತಾಪ ಬಂದಿತ್ತು. ಈ ಎಲ್ಲ ವಾರ್ತಾಪತ್ರಿಕೆಗಳು ಡಿಜಿಟಲ್ ರೂಪದಲ್ಲಿ ಈ ಪ್ರದರ್ಶನದಲ್ಲಿ ಇದ್ದುವು. ಅದೇ ರೀತಿಯಲ್ಲಿ ಅನೇಕ ವಾರ್ತಾಪತ್ರಿಕೆಗಳಲ್ಲೂ ನ್ಯೂಸ್ ಚಾನೆಲ್‌ಗಳಲ್ಲೂ ನನ್ನ ಭೇಟಿಗೆ ಸಂಬಂಧಿಸಿ ವಾರ್ತೆಗಳು ಪ್ರಸಾರಗೊಂಡಿದುವು.

ಮತ್ತೆ ಜಗತ್ತು ಝಾಇನ್ ಮಸೀದಿಯ ಉದ್ಘಾಟನೆಯ ಸುದ್ದಿಯನ್ನೂ ನೀಡಿತು. ಅಮೆರಿಕಾದ ಸುದ್ದಿ ಸಂಸ್ಥೆ ಅಸೋಸಿಯೇಟೆಡ್ ಪ್ರೆಸ್ ಕೂಡ ಝಾಇನ್ ಗೆ ನನ್ನ ಭೇಟಿ ಮತ್ತು ಫತ್ಹೇ ಅಝೀಮ್ ಮಸೀದಿಯ ಉದ್ಘಾಟನೆಯ ಬಗ್ಗೆ ಲೇಖನವನ್ನು ಪ್ರಕಟಿಸಿತು. ಇದರ ಶೀರ್ಷಿಕೆ ಹೀಗಿತ್ತು Two prophets, century old Prayer duel inspire Zion mosque ಅಂದರೆ ಇಬ್ಬರು ಪ್ರವಾದಿಗಳು, ಶತಮಾನದಷ್ಟು ಹಳೆಯದಾದ ಪ್ರಾರ್ಥನೆ ದ್ವಂದ್ವಯುದ್ಧವು ಝಿಯಾನ್ ಮಸೀದಿಯನ್ನು ಪ್ರೇರೇಪಿಸುತ್ತದೆ. ಈ ಮಾಧ್ಯಮದ ವೆಬ್‌ಸೈಟ್‌ನ ಪ್ರಕಾರ, ವಿಶ್ವದ ಜನಸಂಖ್ಯೆಯ ಅರ್ಧದಷ್ಟು ಜನರು ಅದರ ಓದುಗರಾಗಿದ್ದಾರೆ. ಈ

ಲೇಖನವನ್ನು ವಾಷಿಂಗ್ಟನ್ ಪೋಸ್ಟ್, ಎಬಿಸಿ ನ್ಯೂಸ್, ಟೊರೊಂಟೊ ಸ್ಟಾರ್, ದಿ ಹಿಲ್ ಮತ್ತು ಇತರ ಅನೇಕ ಪ್ರಸಿದ್ಧ ಪತ್ರಿಕೆಗಳು ಸೇರಿದಂತೆ ವಿಶ್ವದ ಹದಿಮೂರು ದೇಶಗಳ 412 ಔಟ್‌ಲೆಟ್‌ಗಳು ಮತ್ತು ಪತ್ರಿಕೆಗಳಲ್ಲಿ ಪ್ರಕಟಿಸಲಾಗಿದೆ. ಅಸೋಸಿಯೇಟೆಡ್ ಪ್ರೆಸ್‌ನ ಅಗ್ರ ಹತ್ತು ಲೇಖನಗಳಲ್ಲಿ ಈ ಲೇಖನವೂ ಸೇರಿದೆ. ಗಮನವೇ ಇರಲಿಲ್ಲವೆಂದಲ್ಲ, ಹತ್ತು ಲೇಖನಗಳಲ್ಲಿ ಅದು ಸೇರಿಕೊಂಡಿತ್ತು. 115 ವರ್ಷಗಳ ಹಿಂದೆ ಝೀಯಾನ್‌ನಲ್ಲಿ ಪವಿತ್ರ ಪವಾಡ ಸಂಭವಿಸಿದೆ ಎಂದು ಲೇಖನದಲ್ಲಿ ಹೇಳಲಾಗಿದೆ. ಪ್ರಪಂಚದಾದ್ಯಂತ ಲಕ್ಷಾಂತರ ಅಹ್ಮದಿ ಮುಸ್ಲಿಮರು ಇದನ್ನು ನಂಬುತ್ತಾರೆ. ಶಿಕಾಗೋದಿಂದ ನಲವತ್ತು ಮೈಲಿ ದೂರದಲ್ಲಿರುವ ಮಿಶಿಗನ್ ಸರೋವರದ ತೀರದಲ್ಲಿರುವ ಈ ಸಣ್ಣ ಪಟ್ಟಣಕ್ಕೆ ಅಹ್ಮದಿಯರು ವಿಶೇಷ ಧಾರ್ಮಿಕ ಮಹತ್ವವನ್ನು ನೀಡುತ್ತಾರೆ. ಈ ನಗರಕ್ಕೆ ಅಹ್ಮದೀಯ ಜಮಾಅತ್‌ನ ಬಾಂಧವ್ಯವು ಒಂದು ಶತಮಾನಕ್ಕೂ ಹಿಂದೆ ಮುಬಾಹಲಾ ಮತ್ತು ಭವಿಷ್ಯವಾಣಿಯೊಂದಿಗೆ ಪ್ರಾರಂಭವಾಯಿತು. ಝಿಯಾನ್ ನಗರವನ್ನು 1900 ರಲ್ಲಿ ಕ್ರಿಶ್ಚಿಯನ್ ದೇವಪ್ರಭುತ್ವವಾಗಿ ಸುವಾರ್ತಾಬೋಧಕ ಮತ್ತು ಆರಂಭಿಕ ಪೆಂಟೆಕೋಸ್ಟಲ್ ಬೋಧಕ ಜಾನ್ ಅಲೆಕ್ಸಾಂಡರ್ ಡೌವಿ ಸ್ಥಾಪಿಸಿದನು. ಅಹ್ಮದೀಯ ಮುಸ್ಲಿಮ್ ಜಮಾಅತ್‌ನ ಸಂಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರು ಇಸ್ಲಾಂ ಧರ್ಮದ ವಿರುದ್ಧ ದೋವಿಯ ಧರ್ಮನಿಂದನೆ ಮತ್ತು ದಾಳಿಗಳಿಗೆ ಪ್ರತಿಕ್ರಿಯೆಯಾಗಿ ಇಸ್ಲಾಂ ಧರ್ಮವನ್ನು ಸಮರ್ಥಿಸಿಕೊಂಡರು ಮತ್ತು ಪ್ರಾರ್ಥನೆಯ ಆಯುಧವನ್ನು ಮಾತ್ರ ಬಳಸಿಕೊಂಡು ಆಧ್ಯಾತ್ಮಿಕ ಯುದ್ಧದಲ್ಲಿ ಅವನನ್ನು ಸೋಲಿಸಿದರು ಎಂದು ಅಹ್ಮದಿಯರು ನಂಬುತ್ತಾರೆ. ಝೀಯಾನ್‌ನ ಬಹುತೇಕ ಎಲ್ಲಾ ಇಂದಿನ ನಿವಾಸಿಗಳಿಗೆ ಈ ಪ್ರಾಚೀನ ಪವಿತ್ರ ಯುದ್ಧದ ಬಗ್ಗೆ ಯಾವುದೇ ಜ್ಞಾನವಿಲ್ಲ, ಆದರೆ ಅಹ್ಮದೀಯರಿಗೆ, ಈ ಪವಿತ್ರ ಯುದ್ಧವು ಝೀಯಾನ್ ನಗರಕ್ಕೆ ಶಾಶ್ವತ ಸಂಪರ್ಕವನ್ನು ಸ್ಥಾಪಿಸಿದೆ. ಈ ಶತಮಾನದ ಹಳೆಯ ಪವಾಡವನ್ನು ಸ್ಮರಿಸಲು ಮತ್ತು ನಗರದ ಮೊದಲ ಅಹ್ಮದೀಯ ಮಸೀದಿಯ ಉದ್ಘಾಟನೆಯನ್ನು ಆಚರಿಸಲು ಪ್ರಪಂಚದಾದ್ಯಂತದ ಸಾವಿರಾರು ಅಹ್ಮದಿ ಮುಸ್ಲಿಮರು ನಗರದಲ್ಲಿ ಜಮಾಯಿಸಿದರು, ಇದು ಝೀಯಾನ್ ನಗರದ ಇತಿಹಾಸದಲ್ಲಿ ಪ್ರಮುಖ ಮೈಲಿಗಲ್ಲು ಮತ್ತು ಅವರ ನಂಬಿಕೆಯಾಗಿದೆ. ನಂತರ ಅವರು ಈ ಲೇಖನದಲ್ಲಿ ಮತ್ತಷ್ಟು ಬರೆಯುತ್ತಾರೆ ಮತ್ತು ಡೌವಿಯ ಬಗ್ಗೆ ಅವರು ಅವನ ಹಳೆಯ ಇತಿಹಾಸದ ಬಗ್ಗೆ ಸಾಕಷ್ಟು ಹೇಳಿದ್ದಾರೆ. ಮತ್ತೆ ಅವರು ಹೇಳುತ್ತಾರೆ ಅಹ್ಮದೀಯರ ನಂಬಿಕೆಯ ಪ್ರಕಾರ ಅವರ ಸಂಸ್ಥಾಪಕರು 1835 ರಲ್ಲಿ ಜನಿಸಿದರು ಅವರ ಬಗ್ಗೆ ಇಸ್ಲಾಮ್ ಧರ್ಮದ ಸಂಸ್ಥಾಪಕರು ನೀಡಿದ ಸುವಾರ್ತೆಯ ಪ್ರಕಾರ ಅವರು ಪ್ರಸ್ತುತ ಕಾಲಘಟ್ಟದ ಸುಧಾರಕರಾಗಿದ್ದರು. ಮಿರ್ಝಾ ಗುಲಾಮ್ ಅಹ್ಮದ್ ಸಾಹಿಬ್ ಅವರು ಈಸ ಮಸೀಹರ(ಅ)ರ ಸದೃಶರೂಪಜ ಉದಾಹರಣೆಯಾಗಿ ಎರಡನೇ ಆಗಮನವಾಗಿರುತ್ತದೆ ಎಂಬುದು ಅವರ ನಂಬಿಕೆಯಾಗಿದೆ. ಇದರ ಹೊರತಾಗಿ, ಕೆನಡಾದಲ್ಲಿ ಝೀಯಾನ್‌ನ ಪ್ರವಾಸ ಮತ್ತು ಫತ್ಹೇ ಅಝೀಮ್ ಮಸೀದಿಯ ಉದ್ಘಾಟನೆಯನ್ನು ವ್ಯಾಪಕವಾಗಿ ಕವರೇಜ್ ಆಯಿತು.

ಕೆನಡಾದಲ್ಲಿ ಅಲ್ಲಾಹನ ಅನುಗ್ರಹದಿಂದ, ಝೀಯಾನ್‌ನ ಪ್ರವಾಸವನ್ನು ಒಂಬತ್ತು ಪ್ರಮುಖ ಪತ್ರಿಕೆಗಳು, ಆರು ಆನ್‌ಲೈನ್ ಪ್ರಕಟಣೆಗಳು ಮತ್ತು ಒಂದು ರೇಡಿಯೋ ಸ್ಟೇಷನ್ ಆವರಿಸಿದೆ. ಸಂದೇಶವು ಕೆನಡಾದಲ್ಲಿ ಎಂಟುನೂರ ಐವತ್ತೇಳು ಸಾವಿರ ಜನರಿಗೆ ಜಮಾಅತ್‌ನ ಸಂದೇಶವು ತಲುಪಿತು. ಅಮೇರಿಕಾ, ಕೆನಡಾ, ಯುಕೆ, ಗ್ರೀಸ್, ಸೆರಾ ಲಿಯೋನ್, ತೈವಾನ್, ಭಾರತ, ಹಾಂಗ್ ಕಾಂಗ್, ಪೆರು, ಫಿಲಿಪೈನ್ಸ್, ದಕ್ಷಿಣ ಆಫ್ರಿಕಾ, ತಾಂಜಾನಿಯಾ ಮತ್ತು ವಿಯೆಟ್ನಾಂ ಆನ್‌ಲೈನ್ ಪತ್ರಿಕೆಗಳು ಸಹ ಸುದ್ದಿ ನೀಡಿತು.

ನಾನು ಉಲ್ಲೇಖಿಸಿದ ಅಮೇರಿಕನ್ ಸುದ್ದಿ ಸಂಸ್ಥೆ ಅಸೋಸಿಯೇಟೆಡ್ ಪ್ರೆಸ್‌ನ ಲೇಖನವು ಯುನೈಟೆಡ್ ಸ್ಟೇಟ್ಸ್‌ನ 200 ಪತ್ರಿಕೆಗಳಲ್ಲಿ ಮುದ್ರಿಸಲ್ಪಟ್ಟಿದೆ ಮತ್ತು 176 ಆನ್‌ಲೈನ್ ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ಇದರ ಜೊತೆಗೆ, MTA ಆಫ್ರಿಕಾದಿಂದ ಕಾರ್ಯಕ್ರಮದ ನೇರ ಪ್ರಸಾರವನ್ನು ಸಹ ಒದಗಿಸಲಾಗಿದೆ. ಝಿಯಾನ್ ಮತ್ತು ಡಲ್ಲಾಸ್‌ನಲ್ಲಿ ನಡೆದ ಸಮಾರಂಭಗಳಲ್ಲಿನ ಭಾಷಣಗಳನ್ನು ಗ್ಯಾಂಬಿಯಾ ನ್ಯಾಷನಲ್ ಟಿವಿ, ಸೆರಾ ಲಿಯೋನ್‌ನ ನ್ಯಾಷನಲ್ ಟಿವಿ, ಸೆನೆಗಲ್ ಟಿವಿಯಲ್ಲಿ ನೇರ ಪ್ರಸಾರ ಮಾಡಲಾಯಿತು. ಅದನ್ನು ಸಾಹಿತಿಗಳು ನೋಡಿದ್ದಾರೆ. ಝೀಯಾನ್‌ನಲ್ಲಿರುವ ಮಸ್ಜಿದ್ ಫತ್ಹೇ ಅಝೀಮ್ ಸಮಾರಂಭಕ್ಕೆ ಅರ್ಧ ಘಂಟೆಯ ಮೊದಲು, ನಮ್ಮ ಸ್ಟುಡಿಯೋಗಳಲ್ಲಿ ನೇರ ಪ್ರಸಾರವನ್ನು ಪ್ರಾರಂಭಿಸಲಾಯಿತು ಎಂದು ಹೇಳಲಾಗುತ್ತದೆ, ಅದರ ಮೂಲಕ ಅಲೆಕ್ಸಾಂಡರ್ ಡೌವಿ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಭವಿಷ್ಯವಾಣಿಯ ಹಿನ್ನೆಲೆ ಸ್ಥಳೀಯ ಭಾಷೆಗಳಲ್ಲಿ ವಿವರಿಸಲಾಗಿದೆ. ಆಫ್ರಿಕಾದಾದ್ಯಂತ ಸುದ್ದಿ ವರದಿಗಳು, ಟಿವಿ ರೇಡಿಯೋ ಮತ್ತು ಪತ್ರಿಕೆಗಳಲ್ಲಿ ಕವರೇಜ್ ಇತ್ತು. ಈ ಸುದ್ದಿ ವರದಿಗಳನ್ನು ಉಗಾಂಡಾದ ಐದು ಚಾನೆಲ್‌ಗಳು ಮತ್ತು ಘಾನಾ, ನೈಜೀರಿಯಾ, ಲೈಬೀರಿಯಾ, ಸೆರಾ ಲಿಯೋನ್, ರುವಾಂಡಾದ ಟಿವಿ ಚಾನೆಲ್‌ಗಳಲ್ಲಿ ಪ್ರಕಟಿಸಲಾಗಿದೆ.

ಅಮೀರ್ ಸಾಹಿಬ್ ಸೆರಾ ಲಿಯೋನ್ ಅವರು ಇಪ್ಪತ್ತು ವರ್ಷಗಳ ಸ್ನೇಹಿತನನ್ನು ಹೊಂದಿದ್ದರು, ಅವರು ಈ ವರ್ಷ ಜಲ್ಸಾ ಸಾಲಾನ ಯುಕೆ ಸಂದರ್ಭದಲ್ಲಿ ಬೈಅತ್ ಮಾಡಿದರು. ಅವರು ಝೀಯಾನ್‌ನ ಕಾರ್ಯಕ್ರಮವನ್ನು ನೋಡಿ ಹೇಳಿದರು: ನಾನು ಬಯತ್ ಮಾಡಿದ ದಿವಸ ರಾತ್ರಿ ನನಗೆ ಬಹಳ ವಿಷಾದವಾಯಿತು ನಾನು ಬೈಅತ್ ಮಾಡಲು ಇಷ್ಟು ಸಮಯ ತೆಗೆದುಕೊಂಡಿದ್ದೇಕೆ ಎಂದು. ಆದರೆ ನಿಜ ಹೇಳಬೇಕಾದರೆ ನನಗೆ ಅಮೀರ್ ಸಾಹಿಬ್ ಮೊದಲೆ ಅಲೆಕ್ಸೆಂಡರ್ ದೌವಿಯ ಘಟನೆಯನ್ನು ವಿವರಿಸಿದ್ದರೆ ನಾನು ಇಪತ್ತು ವರ್ಷ ಮುಂಚೆಯೇ ಬೈಅತ್ ಮಾಡುತ್ತಿದ್ದೆ.

ನಾನು ಝೀಯಾನ್ ಭವಿಷ್ಯವಾಣಿಯಿಂದ ಪ್ರಭಾವಿತನಾದ ಹಾಗೆ ಮತ್ತೆ ಯಾವ ಧಾರ್ಮಿಕ ಘಟನೆಯಿಂದ ಹೆಚ್ಚು ಪ್ರಭಾವಿತನಾಗಲಿಲ್ಲ. ನಾನು ಈ ಕಾಲದ ಬಹಳ ದೊಡ್ಡ ಪಂಥಾಹ್ವಾನವನ್ನು ನೋಡಿದ್ದೇನೆ

ಮತ್ತು ದೊಡ್ಡ ವಿಷಯವೆಂದರೆ ಈ ಘಟನೆಯು ಪಾಶ್ಚಿಮಾತ್ಯ ಮಾಧ್ಯಮಗಳ ಸಂಪೂರ್ಣ ಪರಿಶೀಲನೆಯಲ್ಲಿ ನಮ್ಮ ಕಾಲದಲ್ಲಿ ಸಂಭವಿಸಿದೆ. ಹಝ್ರತ್ ಇಮಾಮ್ ಮಹದಿ ಅಲೈಹಿಸ್ಸಲಾಮ್ ಭವಿಷ್ಯದ ಭವಿಷ್ಯವಾಣಿಯನ್ನು ಹೇಗೆ ನುಡಿದಿದ್ದಾರೆ ಎಂದರೆ ಅವರು ಅಲ್ಲಿಯೇ ಇದ್ದಂತೆ ಭವಿಷ್ಯವನ್ನು ನುಡಿದಿದ್ದಾರೆ. ನಂತರ ಅವರು ಹೇಳುತ್ತಾರೆ, ನಾವು ಜಮಾಅತಿನ ಹೊರಗಿನ ಜನರಿಗೆ ಬೋಧಿಸುವಾಗ, ನಾವು ಝಿಯಾನ್‌ನ ಭವಿಷ್ಯವಾಣಿಯನ್ನು ಸಹ ಅವಶ್ಯಕವಾಗಿ ಉಲ್ಲೇಖಿಸಬೇಕು ಏಕೆಂದರೆ ಅದು ಅತ್ಯಂತ ಪರಿಣಾಮಕಾರಿ ಭವಿಷ್ಯವಾಣಿ ಮತ್ತು ವಾದವಾಗಿದೆ. ನಾನು ಬೈಅತ್ ಮಾಡಿದ ರಾತ್ರಿ, ಬಹುಶಃ ನಾನು ಸರಿಯಾದ ನಿರ್ಧಾರವನ್ನು ತೆಗೆದುಕೊಂಡಿದ್ದೇನೆ ಎಂದು ನನಗೆ ಅನಿಸಿತು, ಆದರೆ ಝಿಯಾನ್‌ನ ಭವಿಷ್ಯವಾಣಿಯ ನಂತರ ನಾನು ಸಮಾಧಾನದ ನಿಟ್ಟುಸಿರು ಬಿಟ್ಟೆ ಮತ್ತು ನನ್ನ ಇಪ್ಪತ್ತು ವರ್ಷಗಳ ಸತ್ಯ ಹುಡುಕುವುದು ವ್ಯರ್ಥವಾಗಿಲ್ಲ ಎಂದು ನನಗೆ ಸಂಪೂರ್ಣವಾಗಿ ಮನವರಿಕೆಯಾಯಿತು. ನಾನು ಖಂಡಿತವಾಗಿಯೂ ಸರಿಯಾದ ನಿರ್ಧಾರವನ್ನು ಮಾಡಿದ್ದೇನೆ. ಅದರ ಹೊರತಾಗಿ, ಇತರ ಚಟುವಟಿಕೆಗಳಲ್ಲಿ ಘಾನಾ ರಾಯಭಾರಿಗಳೊಂದಿಗೆ ವಾಷಿಂಗ್ಟನ್, ಮೇರಿಲ್ಯಾಂಡ್ ಮಸೀದಿಯಲ್ಲಿ ಸೆರಾ ಲಿಯೋನ್ ಜೊತೆ ಮಾತುಕತೆ ನಡೆಯಿತು. ಅವರ ದೇಶಗಳ ಸ್ಥಿತಿಗತಿಗಳ ಬಗ್ಗೆಯೂ ಮಾತುಕತೆ ನಡೆದಿದೆ. ಅವರು ಉತ್ತಮ ಸಭೆ ನಡೆಸಿದರು. ನಂತರ ರಾಜ್ಯಪಾಲರೊಂದಿಗೂ ಸಭೆ ನಡೆಸಲಾಯಿತು. ಅಲ್ಲಿಗೆ ಸುಮಾರು ನಲವತ್ತೈದು ಜನ ಬಂದಿದ್ದರು. ಹಳೆಯ ಅಮೇರಿಕನ್ ಅಹ್ಮದೀಯರನ್ನು ಸಹ ಹುಡುಕಲು ನಾನು ಅವರಿಗೆ ಹೇಳಿದೆ. ಅವುಗಳಲ್ಲಿ ಕೆಲವು ಸಹ ಅವರಿಗೆ ಕಂಡುಬಂದಿವೆ ಮತ್ತು ಹೊಸ ಬೈಅತ್ ಮಾಡಿದವರನ್ನು ಅಲ್ಲಿ ವಿರೋಧವನ್ನು ಎದುರಿಸಿದವು ಆದರೆ ದೃಢವಾಗಿ ಅವರೆಲ್ಲರು ಉಳಿದಿದ್ದಾರೆ.

ಓರ್ವ ನವ ಅಹ್ಮದಿ ಹೇಳುತ್ತಾರೆ ಅವರ ಕುಟುಂಬಕ್ಕೆ ವಿಷಯ ತಿಳಿದಾಗ ಅವರು ಸಾಕಷ್ಟು ಪ್ರತಿಭಟನೆ ನಡೆಸಿದರು. ಅದರ ನಂತರ ಅವರು ಅವರನ್ನು ತೊರೆದು ಹೋದರು. ನಂತರ ಬಾಂಗ್ಲಾದೇಶದ ಒಬ್ಬ ಅಹ್ಮದಿ ಇದ್ದಾರೆ ಅವರು ಹೇಳುತ್ತಾರೆ ನನಗೆ ಮುರಬ್ಬಿ ಸಾಹಿಬ್ ಬಹಳ ತಾಳ್ಮೆಯಿಂದ ವಿವರಿಸಲು ಸಾಕಷ್ಟು ಸಮಯವನ್ನು ಕಳೆದಿದ್ದಾರೆ ಮತ್ತು ಈಗ ನಾನು ಅರ್ಥಮಾಡಿಕೊಂಡಿದ್ದೇನೆ ಮತ್ತು ನಂತರ ಬಹಳ ಉತ್ಸಾಹದಿಂದ ಅವರು ಉಳಿದ ನವ ಅಹ್ಮದಿಯರಿಗೆ ನಾನು ಈಗ ಅಹ್ಮದೀಯತ್ ಇಸ್ಲಾಂ ಅನ್ನು ಅರ್ಥಮಾಡಿಕೊಂಡಿದ್ದೇನೆ ಎಂದು ಹೇಳಿದರು. ಮತ್ತು ಇದು ನಿಜವಾದ ಇಸ್ಲಾಂ ಎಂದು ನಾನು ನಿಮಗೆ ಹೇಳುತ್ತಿದ್ದೇನೆ. ಆದ್ದರಿಂದ ಎಂದಿಗೂ ಬಿಡಬೇಡಿ.

ಕ್ರೈಸ್ತ ಧರ್ಮದಿಂದ ಅಹ್ಮದಿಯಾದ ಒಬ್ಬ ಅಮೇರಿಕನ್ ನವ ಅಹ್ಮದಿಯಾದ ಕ್ರಿಸ್ಟೋಫರ್ ಸಾಹಿಬ್‌ರ ಬೈಅತ್ ಮಾಡಿದ್ದರು. ಈ ಬೈಅತ್ತಿನಿಂದ ಹಳೆಯ ಮತ್ತು ವಿವಿಧ ದೇಶಗಳಿಂದ ವಲಸೆ ಬಂದ ಅಹ್ಮದಿಯರ ಮೇಲೂ ಒಂದು ಉತ್ತಮ ಪ್ರಭಾವ ಉಂಟಾಯಿತು. ಅವರಿಗೂ ಬೈಅತ್ ಮಾಡುವ ಸಂದರ್ಭ ಲಭಿಸಿತು. ಅದರಿಂದ ಬಹಳ ಭಾವನಾತ್ಮಕ ಅವಸ್ಥೆ ಉಂಟಾಯಿತು.

ಹೇಗಿದ್ದರೂ ಒಟ್ಟಾರೆ ನೋಡುವುದಾದರೆ ಅಲ್ಲಾಹನು ಈ ಪರ್ಯಟನೆಯನ್ನು ಎಲ್ಲ ರೀತಿಯಲ್ಲೂ ಅನುಗ್ರಹಿಸಿದನು. ಅಲ್ಲಾಹನು ಮುಂದೆಯೂ ಸದಾ ಅನುಗ್ರಹಿಸಲಿ.

***********

**ಇನ್ಸಾನಿಯತ್ ಝಿಂದಾಬಾದ್**
**ಮಾನವೀಯತೆ ಚಿರಕಾಲ ಬಾಳಲಿ**

**ಧಾರ್ಮಿಕ ಉದ್ದೇಶಗಳಿಗಾಗಿ ನಿರ್ದಿಷ್ಟ ಪರಿಸರದಲ್ಲಿ ಒಟ್ಟುಗೂಡುವುದು,**
**ಸರ್ವಶಕ್ತನಾದ ಅಲ್ಲಾಹನ ಸ್ಮರಣೆಗಾಗಿ ಒಟ್ಟುಗೂಡುವುದು, ಅವನ ಸಂತೃಪ್ತಿಗಳಿಸುವುದಕ್ಕೆ ಒಟ್ಟುಗೂಡುವುದು ಖಂಡಿತವಾಗಿಯೂ**
**ಸರ್ವಶಕ್ತನಾದ ಅಲ್ಲಾಹನ ಅನುಗ್ರಹಗಳನ್ನು ಆಕರ್ಷಿಸುತ್ತದೆ.**

**ನಮ್ಮ ಇಜ್ತಿಮಾಗಳ ಪ್ರಮುಖ ಉದ್ದೇಶವೆಂದರೆ ಖಿಲಾಫತ್‌ನ ಅನುಗ್ರಹಗಳನ್ನು ಉಲ್ಲೇಖಿಸುವುದಾಗಿದೆ**
**ಮತ್ತು ಜಮಾಅತ್‌ನ ಸದಸ್ಯರ ಹೃದಯದಲ್ಲಿ ಖಿಲಾಫತ್‌ನೊಂದಿಗೆ ಸಂಪರ್ಕ ಮತ್ತು ನಿಷ್ಠೆಯನ್ನು ಮತ್ತಷ್ಟು ವೃದ್ಧಿಗೊಳಿಸಲು ಮತ್ತು**
**ಬಲಪಡಿಸಲು ಪ್ರಯತ್ನಿಸುವುದಾಗಿದೆ.**

ಮಜ್ಲಿಸ್ ಖುದ್ದಾಮುಲ್ ಅಹ್ಮದೀಯ ಭಾರತದ 52 ನೇ ವಾರ್ಷಿಕ ರಾಷ್ಟ್ರೀಯ ಇಜ್ತಿಮಾದ ಸಂದರ್ಭದಲ್ಲಿ, ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ) ಅವರಿಂದ ಈಮಾನ್‌ವರ್ಧಕ ವಿಶೇಷ **ಸಂದೇಶ**

ಅಕ್ಟೋಬರ್ 21, 22, 23 ಶುಕ್ರವಾರ, ಶನಿವಾರ, ಭಾನುವಾರದಂದು ಜಮಾಅತಿನ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) ಆಯೋಜಿಸಲಾಯಿತು. ಇದರಲ್ಲಿ ವಿವಿಧ ಶೈಕ್ಷಣಿಕ ವಿಷಯಗಳ ಕುರಿತು ವಿಶೇಷ ಅಧಿವೇಶನಗಳ ಹೊರತಾಗಿ, ಶೈಕ್ಷಣಿಕ ಮತ್ತು ಕ್ರೀಡಾ ಸ್ಪರ್ಧೆಗಳನ್ನೂ ಆಯೋಜಿಸಲಾಗಿತ್ತು. ಕೋವಿಡ್–19ರ ನಂತರ, ಈ ವರ್ಷದ ವಾರ್ಷಿಕ ಕೂಟಗಳು ಪ್ರಥಮ ಭಾರಿಗೆ ಪೂರ್ಣ ಸಾಮರ್ಥ್ಯದೊಂದಿಗೆ ನಡೆದವು, ಇದರಲ್ಲಿ ಭಾರತದ ವಿವಿಧ ಪ್ರಾಂತ್ಯಗಳಿಂದ ಹೆಚ್ಚಿನ ಸಂಖ್ಯೆಯಲ್ಲಿ ಜಮಾಅತ್‌ನ ಸ್ನೇಹಿತರು ಆಗಮಿಸಿದ್ದರು ಮತ್ತು ಖಾದಿಯಾನ್‌ನಲ್ಲಿ ಸಾಕಷ್ಟು ಸಂಭ್ರಮವಿತ್ತು. ಅಲ್‌ಹಮ್ದುಲಿಲ್ಲಾಹ್. ಈ ಸಂದರ್ಭದಲ್ಲಿ ಮಜ್ಲಿಸ್ ಖುದ್ದಾಮುಲ್ ಅಹ್ಮದೀಯ ಭಾರತಕ್ಕೆ ಹುಝೂರ್ ಅನ್ವರ್(ಅತಬಿಅ)ರವರು ಕಳುಹಿಸಿದ ಸಂದೇಶವನ್ನು ಓದುಗರ ಸೇವೆಯಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.

بسم اللہ الرحمٰن الرحیم
نحمدہ ونصلی علی رسولہ الکریم وعلی عبدہ المسیح الموعود
خدا کے فضل اور رحم کے ساتھ
ھو الناصر

ಇಸ್ಲಾಮಾಬಾದ್, ಯುಕೆ
MA 28–08–2022

ಮಜ್ಲಿಸ್ ಖುದ್ದಾಮುಲ್ ಅಹ್ಮದೀಯ ಭಾರತದ ಆತ್ಮೀಯ ಸದಸ್ಯರೇ, **ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತಹು**

ಮಜ್ಲಿಸ್ ಖುದ್ದಾಮುಲ್ ಅಹ್ಮದೀಯ ಭಾರತವು ತನ್ನ ವಾರ್ಷಿಕ ಇಜ್ತಿಮಾವನ್ನು ಆಯೋಜಿಸಲು ಅವಕಾಶವನ್ನು ಪಡೆಯುತ್ತಿದೆ ಎಂದು ತಿಳಿದು ನನಗೆ ತುಂಬಾ ಸಂತೋಷವಾಗಿದೆ. ಸರ್ವಶಕ್ತನಾದ ಅಲ್ಲಾಹನು ಈ ಇಜ್ತಿಮಾವನ್ನು ಎಲ್ಲಾ ರೀತಿಯಲ್ಲೂ ಅನುಗ್ರಹಿಸಲಿ ಮತ್ತು ಉತ್ತಮ ಫಲಿತಾಂಶಗಳನ್ನು ನೀಡಲಿ. **ಆಮೀನ್.**

ಒಂದು ನಿರ್ದಿಷ್ಟ ಪರಿಸರದಲ್ಲಿ ಧಾರ್ಮಿಕ ಉದ್ದೇಶಗಳಿಗಾಗಿ ಮಾತ್ರ ಸೇರುವುದು, ಸರ್ವಸಕ್ತನಾದ ಅಲ್ಲಾಹನನ್ನು ಸ್ಮರಿಸುವುದಕ್ಕಾಗಿ ಸೇರುವುದು, ಅವನ ಪ್ರಸನ್ನತೆಯನ್ನು ಪಡೆಯಲು ಸೇರುವುದು ಖಂಡಿತವಾಗಿಯೂ ಅಲ್ಲಾಹನ ಅನುಗ್ರಹವನ್ನು ಆಕರ್ಷಿಸುತ್ತದೆ ಎಂಬುದನ್ನು ನೆನಪಿಡಿ. ಇಂತಹ ಸಂದರ್ಭದಲ್ಲಿ ಭಾಗವಹಿಸುವವರು ಆಲಿಸುವಂತಹ ಒಳ್ಳೆಯ ಮಾತುಗಳನ್ನು ಅನುಸರಿಸಲು ಪ್ರಯತ್ನಿಸಿರಿ. ಒಳ್ಳೆಯತನ ಮತ್ತು ಧರ್ಮನಿಷ್ಠೆ ನಿಮ್ಮ ಧ್ಯೇಯವಾಕ್ಯವನ್ನಾಗಿಸಿರಿ. ಪ್ರಾಪಂಚಿಕ ಕಾರ್ಯಕ್ಕಿಂತ ಧರ್ಮಕ್ಕೆ ಆದ್ಯತೆ ನೀಡಿರಿ. ಖಿಲಾಫತ್‌ನೊಂದಿಗೆ ಸಂಬಂಧ ಹಾಗೂ ನಿಷ್ಠೆಯನ್ನು ವೃದ್ಧಿಗೊಳಿಸಿಕೊಳ್ಳಿ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪದೇ ಪದೇ ಜಮಾಅತಿಗೆ ಧರ್ಮನಿಷ್ಠೆಯನ್ನು ಬೋಧಿಸಿದ್ದಾರೆ. ಸರ್ವಶಕ್ತನಾದ ಅಲ್ಲಾಹನ ಸಂತೃಪ್ತಿಯನ್ನು ಪಡೆಯಲು ಧರ್ಮನಿಷ್ಠೆಯನ್ನು ಅನುಸರಿಸಲು ಅವರು ನಮನ್ನು ಸಲಹೆ ಸೂಚನೆಗಳನ್ನು ನೀಡುತ್ತಾ ಹೀಗೆ ಹೇಳಿದ್ದಾರೆ: ತಖ್ವ (ಧರ್ಮನಿಷ್ಠೆ) ಎಲ್ಲಾ ಪ್ರಾಚೀನ ಪವಿತ್ರ ಗ್ರಂಥಗಳ ಸಾರಾಂಶವಾಗಿದೆ. ಈ ನಿಟ್ಟಿನಲ್ಲಿ ಅವರು ತಮ್ಮ ಒಂದು ಇಲ್‌ಹಾಮ್ (ದೈವವಾಣಿ) ಅನ್ನು ಉಲ್ಲೇಖಿಸಿ ನುಡಿಯುತ್ತಾರೆ:

"ನನಗೆ ಅಲ್ಲಾಹನ ಕಡೆಯಿಂದ ಅನೇಕ ಬಾರಿ ದೈವವಾಣಿಯಾಗಿದೆ. ನೀವು ಧರ್ಮನಿಷ್ಠರಾಗಿರಿ ಮತ್ತು ಧರ್ಮನಿಷ್ಠೆಯ ಉತ್ತಮ ಮಾರ್ಗಗಳನ್ನು ಅನುಸರಿಸಿದಾಗ ಅಲ್ಲಾಹನು ನಿಮ್ಮೊಂದಿಗೆ ಇರುತ್ತಾನೆ." ನಂತರ ಹೇಳಿದರು, "ನನ್ನ ಜಮಾಅತ್ತಿನ ಸದಸ್ಯರು ಧರ್ಮನಿಷ್ಠೆ ಹಾಗೂ ಪರಿಶುದ್ಧರಾಗಲು ನಾನು ಏನು ಮಾಡಲಿ ಎಂದು ನನ್ನ ಹೃದಯದಲ್ಲಿ ಬಹಳ ನೋವುಂಟಾಗುತ್ತಿರುತ್ತದೆ." ಮತ್ತೆ ಅವರು ಹೇಳುತ್ತಾರೆ "ನಾನು ಎಷ್ಟು ದುಆ ಮಾಡುತ್ತೇನೆ ಎಂದರೆ ನಾನು ದುಆ ಮಾಡುವಾಗ ನಾನು ಅಶಕ್ತನಾಗುತ್ತೇನೆ ಮತ್ತು ಕೆಲವೊಮ್ಮೆ ಆ ಅಶಕ್ತತೆ ಮೂರ್ಛೆ ಮತ್ತು ಸಾವಿನ ಹಂತವನ್ನು ತಲುಪುತ್ತದೆ." ಅವರು ಹೇಳಿದರು, "ಎಲ್ಲಿಯವರೆಗೆ ಒಂದು ಜಮಾತ್ ಸರ್ವಶಕ್ತನಾದ ಅಲ್ಲಾಹನ ದೃಷ್ಟಿಯಲ್ಲಿ ಧರ್ಮನಿಷ್ಠರಾಗುವುದಿಲ್ಲವೊ ಅಲ್ಲಾಹನ ಸಹಾಯ ಹಾಗೂ ಬೆಂಬಲ ಅವರೊಂದಿಗೆ ಇರುವುದಿಲ್ಲ." ಮತ್ತೆ ಅವರು ಹೇಳಿದರು, "ತಖ್ವಾವು (ಧರ್ಮನಿಷ್ಠೆಯು) ಪವಿತ್ರ ಗ್ರಂಥಗಳ, ತೌರಾತ್‌ನ ಮತ್ತು ಇಂಜೀಲಿನ ಬೋಧನೆಗಳ ಸಾರಾಂಶವಾಗಿದೆ." ಪವಿತ್ರ ಖುರ್‌ಆನ್ ಒಂದು ಪದದಲ್ಲಿ (ತಖ್ವದಲ್ಲಿ) ಸರ್ವಶಕ್ತನಾದ ಅಲ್ಲಾಹನ ವೈಭವಯುತ ಉದ್ದೇಶವನ್ನು ಉಲ್ಲೇಖಿಸಿದ್ದಾನೆ. ಅವರು ಹೇಳಿದರು, "ನನ್ನ ಜಮಾಅತ್ತಿನಲ್ಲಿ ನಿಜವಾದ ಧರ್ಮನಿಷ್ಠರನ್ನು, ಧರ್ಮಕ್ಕೆ ಲೌಕಿಕತೆಯ ಮೇಲೆ ಆದ್ಯತೆ ನೀಡುವವರನ್ನು ಮತ್ತು ಅಲ್ಲಾಹನಿಂದ ಸಂಪರ್ಕ ಕಡಿತಗೊಂಡವರನ್ನು ಪ್ರತ್ಯೇಕಿಸಲು ನಾನು ಚಿಂತಿಸುತ್ತಿದ್ದೇನೆ. ಮತ್ತು ಅವರಿಗೆ ಕೆಲವು ಧಾರ್ಮಿಕ ಕಾರ್ಯಗಳನ್ನು ಒಪ್ಪಿಸಬೇಕು. ಅದೇ ರೀತಿ ನಾನು ಪ್ರಾಪಂಚಿಕ ಭೋಗಗಳಲ್ಲಿ ತಲ್ಲೀನರಾಗಿರುವವರನ್ನು ಮತ್ತು ಹಗಲಿರಳು ಪ್ರಾಪಂಚಿಕ ಬೇಡಿಕೆಯಲ್ಲಿ ತಮ್ಮ ಜೀವನವನ್ನು ಕಳೆಯುವವರ ಬಗ್ಗೆ ಕಾಳಜಿ ವಹಿಸಬಾರದು."....... (ಮಲ್‌ಫೂಝಾತ್, ಸಂಪುಟ–1, ಪುಟ–303)

ಹೀಗೆ ಇದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರ ನೋವಾಗಿತ್ತು ಅಂದರೆ ನಮ್ಮ ಜಮಾಅತ್ತಿನ ಪ್ರತಿಯೊಬ್ಬ ಸದಸ್ಯನೂ ಧರ್ಮನಿಷ್ಠೆಯನ್ನು ಅನುಸರಿಸುವವನಾಗಿರಬೇಕು. ಅಂದರೆ ಲೋಕದ ದುಃಖ ಮಾತ್ರ ಆತನಿಗೆ ಸದಾ ಇರಬಾರದು.

ನಮ್ಮ ಇಜ್ತಿಮಾಗಳ ಪ್ರಮುಖ ಉದ್ದೇಶವೆಂದರೆ ಖಿಲಾಫತ್‌ನ ಅನುಗ್ರಹಗಳನ್ನು ಉಲ್ಲೇಖಿಸುವುದು ಮತ್ತು ಜಮಾಅತ್ ಸದಸ್ಯರ ಹೃದಯದಲ್ಲಿ ಖಿಲಾಫತ್‌ನೊಂದಿಗೆ ಸಂಬಂಧ ಮತ್ತು ನಿಷ್ಠೆಯನ್ನು ಮತ್ತಷ್ಟು ಎತ್ತಿ ಹಿಡಿಯಲು ಮತ್ತು ಬಲಪಡಿಸಲು ಪ್ರಯತ್ನಿಸುವುದಾಗಿದೆ. ಖಿಲಾಫತ್ ಎಂಬುದು ನಿಸ್ಸಂದೇಹವಾಗಿ ಸರ್ವಶಕ್ತನಾದ ಅಲ್ಲಾಹನಿಂದ ಒಂದು ದೊಡ್ಡ ಪ್ರತಿಫಲವಾಗಿದೆ, ಇದು ಅಂತಿಮ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರೀತಿಯ ಜಮಾಅತ್ತಿಗೆ ನೀಡಲ್ಪಟ್ಟಿದೆ. ಆದ್ದರಿಂದ, ಅಲ್ಲಾಹನ ಈ ಸರಪಳಿಯನ್ನು ಬಿಗಿಯಾಗಿ ಹಿಡಿದಿಟ್ಟುಕೊಳ್ಳುವುದು ನಮ್ಮ ಕರ್ತವ್ಯವಾಗಿದೆ.

ಹಝ್ರತ್ ಮುಸ್ಲೆಹ್ ಮೌಊದ್(ರ) ಹೇಳುತ್ತಾರೆ:

"ನಿಮ್ಮ ಪ್ರಗತಿಯು ಖಿಲಾಫತ್‌ನೊಂದಿಗೆ ಸಂಪರ್ಕ ಹೊಂದಿದೆ ಎಂಬುದನ್ನು ನೀವು ನೆನಪಿಟ್ಟುಕೊಳ್ಳಬೇಕು ಮತ್ತು ನೀವು ಅದನ್ನು ಅರ್ಥಮಾಡಿಕೊಳ್ಳದ ಮತ್ತು ಅದನ್ನು ಎತ್ತಿಹಿಡಿಯದ ದಿನ, ಆ ದಿನವು ನಿಮ್ಮ ವಿನಾಶದ ದಿನವಾಗಿರುತ್ತದೆ, ಆದರೆ ನೀವು ಅದರ ವಾಸ್ತವತೆಯನ್ನು ಅರ್ಥಮಾಡಿಕೊಂಡರೆ ಮತ್ತು ಅದನ್ನು ಎತ್ತಿ ಹಿಡಿದರೆ. ಇಡೀ ಜಗತ್ತು ನಿಮ್ಮನ್ನು ನಾಶಪಡಿಸಲು ಯತ್ನಿಸಿದರೂ ಅದು ಸಾಧ್ಯವಾಗದು."

ಈ ಇಜ್ತಿಮಾದಿಂದ ಪ್ರಯೋಜನ ಪಡೆಯುವ ಅವಕಾಶವನ್ನು ಅಲ್ಲಾಹನು ನಿಮಗೆಲ್ಲರಿಗೂ ನೀಡಲಿ. ಮತ್ತು ಈ ಇಜ್ತಿಮಾಕ್ಕೆ ಸಂಬಂಧಿಸಿದ ಪ್ರತಿಯೊಂದು ಅನುಗ್ರಹಗಳನ್ನು ನಿಮ್ಮಲ್ಲಿ ಪ್ರತಿಯೊಬ್ಬರು ಪಡೆಯುವವರನ್ನಾಗಿ ಮಾಡಲಿ ಮತ್ತು ನಮಗೆಲ್ಲರಿಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಪ್ರಾರ್ಥನೆಯ ವಾರಸುದಾರರನ್ನಾಗಿ ಮಾಡಲಿ. **ಆಮೀನ್**

ವಸ್ಸಲಾಮ್
ಮಿರ್ಝಾ ಮಸ್ರೂರ್ ಅಹ್ಮದ್
ಖಲೀಫತುಲ್ ಮಾಸೀಹ್ ಖಾಮಿಸ್

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಅಭಿಪ್ರಾಯಗಳನ್ನು ತಿಳಿದುಕೊಂಡು ಜಮಾಅತ್ತಿನವರನ್ನು ಸಮಿತಿಯ ಸದಸ್ಯರನ್ನಾಗಿ ನೇಮಿಸಬೇಕು ಎಂದು ಹಾಜರಿದ್ದವರು ಒಮ್ಮತದಿಂದ ಘೋಷಿಸಿದರು. ಅದರ ನಂತರ, ಸಭೆಯು ಕೊನೆಗೊಂಡಿತು ಮತ್ತು ಸ್ನೇಹಿತರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರೊಂದಿಗೆ ಹಸ್ತಲಾಘವ ಮಾಡಿದರು. ಇದು ಅಹ್ಮದಿಯಾ ಜಮಾಅತ್‌ನ ಮೊದಲ ಐತಿಹಾಸಿಕ ಜಲ್ಸ ಆಗಿತ್ತು ಮತ್ತು 75 ಸ್ನೇಹಿತರು ಈ ಜಲ್ಸದಲ್ಲಿ ಭಾಗವಹಿಸಿದ್ದರು."(ತಾರೀಖೆ ಅಹ್ಮದೀಯತ್, ಸಂಪುಟ–1, ಪುಟ–440, ಖಾದಿಯಾನ್, 2007 ರಲ್ಲಿ ಪ್ರಕಟಿತ)

## ಜಲ್ಸ ಸಾಲಾನದ ಮೂಲ ಗುರಿಗಳು ಮತ್ತು ಉದ್ದೇಶಗಳು ಪ್ರಾಪಂಚಿಕ ಪ್ರೀತಿ ತಣ್ಣಗಾಗಲಿ ಅಲ್ಲಾಹನ ಮತ್ತು ಅಲ್ಲಾಹನ ಸಂದೇಶವಾಹಕರ(ಸ) ಪ್ರೀತಿಯು ಹೃದಯದಲ್ಲಿ ಮೇಲುಗೈ ಸಾಧಿಸಲಿ

### ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಈ ಪುಸ್ತಕದಲ್ಲೇ ಅಂದರೆ ಆಸ್ಮಾನಿ ಫೈಸ್ಲದಲ್ಲಿ ಮುಂದಿನ ವರ್ಷಗಳಲ್ಲಿ, ನಿಗದಿತ ದಿನಾಂಕದಂದು ಜಮಾಅತ್ತಿನ ಸದಸ್ಯರು ಜಲ್ಸದಲ್ಲಿ ಹಾಜರಾಗಲು ತಿಳಿಸುತ್ತ ಅವರು ಹೇಳಿದರು:

ಬೈಅತ್‌ನಲ್ಲಿ ಪ್ರವೇಶಿಸುವ ಎಲ್ಲಾ ಪ್ರಾಮಾಣಿಕ ಜನರು ಈ ವಿನಮ್ರ ವ್ಯಕ್ತಿಗೆ ಬೈಅತ್ ಮಾಡಿದ ಉದ್ದೇಶವು ಹೀಗಿದೆ, ಪ್ರಾಪಂಚಿಕ ಪ್ರೀತಿಯನ್ನು ತಣ್ಣಗಾಗಿಸಿ, ನಮ್ಮ ಪ್ರೀತಿಯ ಯಜಮಾನ ಹಾಗೂ ಪ್ರವಾದಿ (ಸಲ್ಲಲ್ಲಾಹು ಅಲೈಹಿವಸಲ್ಲಮ್) ಅವರ ಮೇಲಿನ ಪ್ರೀತಿಯನ್ನು ಹೃದಯದಲ್ಲಿ ಮೇಲುಗೈ ಸಾಧಿಸಲು ಮತ್ತು ಅದರಿಂದ ಪರಲೋಕದ ಪ್ರಯಾಣವನ್ನು ಸುಖಕರವಾಗಿಸಲು, ಹಾಗೂ ಈ ಗುರಿಯನ್ನು ಸಾಧಿಸುವ ಪ್ರಯತ್ನದಲ್ಲಿ ಉಳಿಯಲು ಮತ್ತು ತಮ್ಮ ಜೀವನದ ಒಂದು ಭಾಗವನ್ನು ಇದರಲ್ಲಿ ಕಳೆಯುವುದು ಅವಶ್ಯಕವಾಗಿರುತ್ತದೆ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನು ಇಚ್ಛಿಸಿದರೆ, ಕೆಲವು ಪುರಾವೆಗಳ ವೀಕ್ಷಣೆಯಿಂದ ದೌರ್ಬಲ್ಯ, ಕುರುಡುತನ ಮತ್ತು ಆಯಾಸವನ್ನು ತೆಗೆದುಹಾಕಲಾಗುತ್ತದೆ ಮತ್ತು ಖಚಿತತೆಯು ಪರಿಪೂರ್ಣವಾಗುತ್ತದೆ. ಪ್ರೀತಿಗಾಗಿ ರುಚಿ, ಉತ್ಸಾಹ ಮತ್ತು ಹಂಬಲವು ಹುಟ್ಟಬೇಕು ಆದ್ದರಿಂದ ಇದನ್ನು ಗಳಿಸುವುದಕ್ಕೆ ಯಾವಾಗಲೂ ಚಿಂತಿಸಬೇಕು. ಮತ್ತು ಸರ್ವಶಕ್ತನಾದ ಅಲ್ಲಾಹನಲ್ಲಿ ಈ ಅವಕಾಶವನ್ನು ನೀಡಬೇಕೆಂದು ದುಆ ಮಾಡಬೇಕು, ಮತ್ತು ಈ ಅವಕಾಶವನ್ನು ಪಡೆಯುವವರೆಗೆ, ಕೆಲವೊಮ್ಮೆ ನಮ್ಮೊಂದಿಗೆ ಭೇಟಿಯಾಗುತ್ತಿರಬೇಕು, ಏಕೆಂದರೆ ಬೈಅತ್‌ನಲ್ಲಿ ಪ್ರವೇಶಿಸಿದ ನಂತರ ಭೇಟಿ ಮಾಡದಿದ್ದರೆ, ಅಂತಹ ಬೈಅತ್ ಸಂಪೂರ್ಣವಾಗಿ ಅನುಗ್ರಹಿಸಲ್ಪಡುವುದಿಲ್ಲ ಅದು ಕೇವಲ ಒಂದು ಆಚರಣೆಯಾಗಿ ಉಳಿದಿರುತ್ತದೆ.

### ಅಲ್ಲಾಹನ ದೈವಿಕ ಮಾತುಗಳನ್ನು ಆಲಿಸಲು ಮತ್ತು ದುಆನಲ್ಲಿ ಪಾಲ್ಗೊಳ್ಳಲು ಎಲ್ಲಾ ಸ್ನೇಹಿತರು ಬರಬೇಕು

ಮತ್ತು ಎಲ್ಲರಿಗೂ ಸಾಧ್ಯವಿಲ್ಲದ ಕಾರಣ, ಪ್ರಕೃತಿಯ ದೌರ್ಬಲ್ಯ ಅಥವಾ ಸಾಮರ್ಥ್ಯ ಅಥವಾ ದೂರದ ಕೊರತೆಯಿಂದಾಗಿ, ಸಹವಾಸದಲ್ಲಿ ಉಳಿಯಲು ಅಥವಾ ವರ್ಷಕ್ಕೆ ಕೆಲವು ಬಾರಿ ನೋವು ಅನುಭವಿಸಿದ ನಂತರ ಭೇಟಿ ನೀಡಲು ಸಾಧ್ಯವಿಲ್ಲ, ಏಕೆಂದರೆ ಹೆಚ್ಚಿನ ಹೃದಯಗಳು ಇನ್ನೂ ಅಂತಹ ಜಲ್ಸಕ್ಕಾಗಿ ಬಹಳ ಕಷ್ಟಪಟ್ಟು ಹೋಗಬೇಕೆಂಬ ಆಸೆ ಹೊಂದಿಲ್ಲ. ಆದುದರಿಂದ ವರ್ಷದಲ್ಲಿ ಮೂರು ದಿನಗಳನ್ನು ಇಂತಹ ಜಲ್ಸಕ್ಕೆ ಮೀಸಲಿಡುವುದು ಸೂಕ್ತವೆನಿಸುತ್ತದೆ, ಸರ್ವಶಕ್ತನಾದ ಅಲ್ಲಾಹನು ಇಚ್ಛೆಯಿಸಿದ್ದಲ್ಲಿ ಎಲ್ಲಾ ನಿಷ್ಠಾವಂತರು ಆರೋಗ್ಯ, ವಿರಾಮ ಮತ್ತು ಯಾವುದೇ ಅಡೆತಡೆಗಳಿಲ್ಲದಿದ್ದರೆ ನಿಗದಿತ ದಿನಾಂಕದಂದು ಹಾಜರಾಗಬಹುದು ಎಂದು ನಾನು ಭಾವಿಸುತ್ತೇನೆ. ಆ ದಿನಾಂಕಗಳು ಡಿಸೆಂಬರ್ 27 ರಿಂದ ಡಿಸೆಂಬರ್ 29 ರವರೆಗೆ ಘೋಷಿಸುವುದು ಉತ್ತಮ ಎಂದು ನಾನು ಭಾವಿಸುತ್ತೇನೆ. ಅದೇನೆಂದರೆ ಇಂದಿನ ನಂತರ ಅಂದರೆ ಡಿಸೆಂಬರ್ 30, 1891, ಡಿಸೆಂಬರ್ 27 ರ ದಿನಾಂಕವು ನಮ್ಮ ಜೀವನದಲ್ಲಿ ಬಂದರೆ, ಸಾಧ್ಯವಾದಷ್ಟು ಮಟ್ಟಿಗೆ ಎಲ್ಲಾ ಸ್ನೇಹಿತರು ಈ ದಿನಾಂಕದಂದು ದೈವಿಕ ಮಾತುಗಳನ್ನು ಆಲಿಸಲು ಮತ್ತು ದುಆವಿನಲ್ಲಿ ಭಾಗವಹಿಸಬೇಕು.

### ಈಮಾನ್ ಮತ್ತು ನಂಬಿಕೆ ಮತ್ತು ಜ್ಞಾನದ ಬೆಳವಣಿಗೆಯ ಮೂಲ

ಮತ್ತು ಈ ಜಲ್ಸದಲ್ಲಿ, ಈಮಾನ್, ನಂಬಿಕೆ ಮತ್ತು ಜ್ಞಾನದ ಬೆಳವಣಿಗೆಗೆ ಅಗತ್ಯವಾದ ಸತ್ಯ ಮತ್ತು ಬೋಧನೆಗಳನ್ನು ನಿರೂಪಿಸುವ ಕಾರ್ಯವಿರುತ್ತದೆ ಮತ್ತು ಆ ಸ್ನೇಹಿತರಿಗಾಗಿ ವಿಶೇಷ ಪ್ರಾರ್ಥನೆ ಮತ್ತು ಗಮನವನ್ನು ನೀಡಲಾಗುತ್ತದೆ ಅತ್ಯಂತ ಕರುಣಾಮಯಿಯಾದ ಅಲ್ಲಾಹನು ಅವರನ್ನು ತನ್ನ ಕಡೆಗೆ ಸೆಳೆಯಲು ಅವರನ್ನು ತನಗಾಗಿ ಸ್ವೀಕರಿಸಿಕೊಳ್ಳಲು ಮತ್ತು ಅವರಲ್ಲಿ ಶುದ್ಧ ಬದಲಾವಣೆಯನ್ನು ತರಲು ಪ್ರಯತ್ನಿಸಲಾಗುವುದು.

### ಸಂಬಂಧಗಳು ಮತ್ತು ಪರಿಚಯಗಳು ಬೆಳೆಯುತ್ತವೆ

ಮತ್ತು ಈ ಜಲ್ಸಗಳಲ್ಲಿ ತಾತ್ಕಾಲಿಕ ಪ್ರಯೋಜನವಿದೆ ಅದು ಏನೆಂದರೆ ಪ್ರತಿ ಹೊಸ ವರ್ಷದಲ್ಲಿ, ಅನೇಕ ಹೊಸ ಸಹೋದರರು ಈ ಜಮಾಅತ್ತಿನಲ್ಲಿ ಪ್ರವೇಶಿಸುತ್ತಾರೆ. ಅವರು ನಿಗದಿತ ದಿನಾಂಕದಂದು ಹಾಜರಾಗುತ್ತಾರೆ ಮತ್ತು ಮೊದಲ ಸಲ ಅನೇಕ ಹೊಸ ಸಹೋದರರ ಮುಖಗಳನ್ನು ನೋಡುತ್ತಾರೆ ಮತ್ತು ಪರಸ್ಪರ ತಿಳಿದುಕೊಳ್ಳುತ್ತಾರೆ. ತಮ್ಮನ್ನು ತಾವು ಪರಿಚಯಿಸಿಕೊಳ್ಳುತ್ತಾರೆ. ಇದು ಅಭಿವೃದ್ಧಿ ಹೊಂದುತ್ತಲೇ ಇರುತ್ತದೆ ಮತ್ತು ಈ ಅವಧಿಯಲ್ಲಿ ಈ ನಮ್ಮಿಂದ ಅಗಲಿದ ಲೋಕದಿಂದ ಮರಣಹೊಂದಿದ ಸಹೋದರರಿಗೆ ಈ ಜಲ್ಸದಲ್ಲಿ ದುಆ ಮಾಡಲಾಗುವುದು ಮತ್ತು ಎಲ್ಲಾ ಸಹೋದರರನ್ನು ಆಧ್ಯಾತ್ಮಿಕವಾಗಿ ಒಂದುಗೂಡಿಸಲು, ಅವರ ಅಪರಿಚಿತನವನ್ನು ಮತ್ತು ಬೂಟಾಟಿಕೆಗಳನ್ನು ಮಧ್ಯದಿಂದ ತೆಗೆದುಹಾಕಲು ಸರ್ವಶಕ್ತನಾದ ಅಲ್ಲಾಹನ ಆಸ್ತಾನದಲ್ಲಿ ಪ್ರಯತ್ನಿಸಲಾಗುತ್ತದೆ. ಮತ್ತು ಈ ಆಧ್ಯಾತ್ಮಿಕ ಜಲ್ಸದಲ್ಲಿ ಇನ್ನೂ ಅನೇಕ ಆಧ್ಯಾತ್ಮಿಕ ಪ್ರಯೋಜನಗಳು ಮತ್ತು ಲಾಭಗಳು ಇರುತ್ತವೆ, ಅದು ಕಾಲಕಾಲಕ್ಕೆ ಪ್ರಕಟವಾಗುವುದು, ಇನ್‌ಶಾಅಲ್ಲಾಹ್.

### ಕಡಿಮೆ ಸಾಮರ್ಥ್ಯವಿರುವ ಸ್ನೇಹಿತರೇ, ಮುಂಚಿತವಾಗಿ ಕಾಳಜಿ ವಹಿಸಿ

ಮತ್ತು ಕಡಿಮೆ ಸಾಮರ್ಥ್ಯವಿರುವ ಸ್ನೇಹಿತರು ಮುಂಚಿತವಾಗಿ ಈ ಜಲ್ಸದಲ್ಲಿ ಹಾಜರಾಗಲು ಕಾಳಜಿ ವಹಿಸುವುದು ಸೂಕ್ತವಾಗಿರುತ್ತದೆ. ಮತ್ತು ಪ್ರತಿ ದಿನ ಅಥವಾ ಪ್ರತಿ ತಿಂಗಳು ಸ್ವಲ್ಪ ಹಣವನ್ನು ಉಳಿಸಿ ಯೋಜನೆಯೊಂದಿಗೆ ಮತ್ತು ತೃಪ್ತಿಯಿಂದ ಬದಿಗಿಟ್ಟರೆ, ಈ ಪ್ರಯಾಣವು ಉಚಿತವಾಗಿ ಪ್ರಯಾಣಿಸಿದಂತೆ ಪ್ರಯಾಣಕ್ಕೆ ಹಣವು ಲಭ್ಯವಾಗುತ್ತದೆ.

ಮತ್ತು ಈಗ, ಡಿಸೆಂಬರ್ 27, 1891 ರಂದು, ಧಾರ್ಮಿಕ ಸಲಹೆಗಾಗಿ ಜಲ್ಸವನ್ನು ನಡೆಸಲಾಯಿತು, ಅಲ್ಲಾಹನಿಗಾಗಿ ನೋವು ಮತ್ತು ಸಂಕಟಗಳನ್ನು ಅನುಭವಿಸಿ ಅನೇಕ ಸ್ನೇಹಿತರು ಈ ಜಲ್ಸದಲ್ಲಿ ಭಾಗವಹಿಸಿದರು, ಅಲ್ಲಾಹನು ಅವರಿಗೆ ಪ್ರತಿಫಲವನ್ನು ನೀಡಲಿ ಮತ್ತು ಅವರ ಪ್ರತಿ ಹೆಜ್ಜೆಯ ಪ್ರತಿಫಲವನ್ನು ಅವರಿಗೆ ನೀಡಲಿ. ಆಮೀನ್. (ಆಸ್ಮಾನಿ ಫೈಸ್ಲ, ರೂಹಾನಿ ಖಝಾಈನ್, ಸಂಪುಟ–4, ಪುಟ–351)

### ಧಾರ್ಮಿಕ ಪ್ರಯೋಜನ ಮತ್ತು ಜ್ಞಾನವನ್ನು ಹೆಚ್ಚಿಸುವುದು ಜಲ್ಸಾದ ಮುಖ್ಯ ಉದ್ದೇಶವಾಗಿದೆ

ನಂತರ, ಡಿಸೆಂಬರ್ ಮೊದಲ ವಾರದಲ್ಲಿ, ಮುಂದಿನ ವರ್ಷ ಅಂದರೆ 1892 ರಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಜಮಾಅತ್‌ನ ಸ್ನೇಹಿತರಿಗೆ ಜಾಹೀರಾತಿನ ಮೂಲಕ ಬರೆದರು:

ಎಲ್ಲಾ ಪ್ರಾಮಾಣಿಕ ಸ್ನೇಹಿತರಲ್ಲಿ ವಿನಂತಿಸಲಾಗುವುದೇನೆಂದರೆ, ಈ ವಿನಮ್ರ ವ್ಯಕ್ತಿಯ ಪ್ರೇಮಿಗಳ ಮತ್ತು ಪ್ರಾಮಾಣಿಕರ ಜಲ್ಸವನ್ನು ಡಿಸೆಂಬರ್ 27, 1892 ರಂದು ಖಾದಿಯಾನ್‌ನಲ್ಲಿ ನಡೆಸಬೇಕೆಂದು ವಿನಂತಿಸಲಾಗಿದೆ. ಈ ಜಲ್ಸದ ಮುಖ್ಯ ಉದ್ದೇಶವೆಂದರೆ ಪ್ರತಿಯೊಬ್ಬ ಪ್ರಾಮಾಣಿಕ ವ್ಯಕ್ತಿಯು ಮುಖಾಮುಖಿಯಾಗಿ ಧಾರ್ಮಿಕ ಪ್ರಯೋಜನವನ್ನು ಪಡೆಯುವ ಅವಕಾಶವನ್ನು ಪಡೆಯುತ್ತಾನೆ ಮತ್ತು ಅವರ ಜ್ಞಾನವು ವಿಸ್ತಾರವಾಗುತ್ತದೆ ಮತ್ತು ಅವರ ಜ್ಞಾನವು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅಭಿವೃದ್ಧಿಗೊಳ್ಳುತ್ತದೆ. ಆಗ ಈ ಜಮಾಅತ್ತಿನ ಎಲ್ಲಾ ಸಹೋದರರ ಪರಿಚಯವನ್ನು ಹೆಚ್ಚಿಸುತ್ತದೆ ಮತ್ತು ಈ ಜಮಾಅತ್ತಿನ ಸಹೋದರ ಸಂಬಂಧಗಳನ್ನು ಬಲಪಡಿಸುತ್ತದೆ ಹೀಗೆ ಅನೇಕ ಪ್ರಯೋಜನಗಳಿವೆ. ಅದರೊಂದಿಗೆ ಯುರೋಪ್ ಮತ್ತು ಅಮೇರಿಕದ ಧಾರ್ಮಿಕ ಭಾವೈಕ್ಯತೆಗಾಗಿ ಉತ್ತಮ ಕ್ರಮಗಳನ್ನು ಮಂಡಿಸಬೇಕು ಎಂಬುದೂ ಜಲ್ಸದ ಪ್ರಮುಖ ಘಟನೆಗಳಲ್ಲಿ ಒಂದಾಗಿದೆ. ಏಕಂದರೆ ಯುರೋಪ್ ಮತ್ತು ಅಮೇರಿಕದ ಭಾಗ್ಯವಂತ ಜನರು ಇಸ್ಲಾಂ ಧರ್ಮವನ್ನು ಸ್ವೀಕರಿಸಲು ಸಿದ್ಧರಾಗುತ್ತಿದ್ದಾರೆ ಎಂಬುದು ಈಗ ಸಾಬೀತಾಗಿದೆ....... ಸಹೋದರರೇ, ಖಂಡಿತ ಈ ಜಮಾಅತ್ ನಮಗಾಗಿ ರಚನೆಯಾಗಲಿದೆ ಎಂಬುದನ್ನು ಅರ್ಥಮಾಡಿಕೊಳ್ಳಿ. ಸರ್ವಶಕ್ತನಾದ ಅಲ್ಲಾಹನು ಧರ್ಮನಿಷ್ಠರನ್ನು ಜಮಾಅತ್ ಇಲ್ಲದೆ ಬಿಡುವುದಿಲ್ಲ, ಇನ್‌ಶಾಅಲ್ಲಾಹ್, ಸತ್ಯದ ಅನುಗ್ರಹವು ಅವರೆಲ್ಲರನ್ನೂ ಅದರ ಕಡೆಗೆ ಸೆಳೆಯುತ್ತದೆ. ಇದನ್ನು ಅಲ್ಲಾಹನು ಸ್ವರ್ಗದಲ್ಲಿ ಇಚ್ಛಿಸಿದ್ದಾನೆ ಮತ್ತು ಅದನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ.

### ಬರಲು ಸಾಮರ್ಥ್ಯವುಳ್ಳವರು ಅವಶ್ಯಕವಾಗಿ ಬರಬೇಕು

"ಹಲವು ಅನುಗ್ರಹಪೂರ್ಣ ಕಾರ್ಯಗಳಿಂದ ಒಳಗೊಂಡಿರುವ ಈ ಜಲ್ಸಾದಲ್ಲಿ ಸಂಪತ್ತಿನ ಶಕ್ತಿ ಹೊಂದಿರುವ ಪ್ರತಿಯೊಬ್ಬರು ಅವಶ್ಯವಾಗಿ ಪಾಲ್ಗೊಳ್ಳಬೇಕು. ಮತ್ತು ಚಳಿಗಾಲಕ್ಕೆ ಹೊಂದಿಕೊಳ್ಳುವಂತಹ ಅಗತ್ಯ

ಹಾಸಿಗೆಯೂ ತಮ್ಮ ಜೊತೆಯಲ್ಲಿ ತರಬೇಕು. ಅಲ್ಲಾಹನ ಮತ್ತು ಅವನ ಪ್ರವಾದಿಯ ಮಾರ್ಗದಲ್ಲಿ ಸಣ್ಣ ಸಣ್ಣ ಅಡೆ ತಡೆಗಳನ್ನು ಲೆಕ್ಕಿಸಬಾರದು. ಅಲ್ಲಾಹನು ತನ್ನ ಆಪ್ತ ಭಕ್ತರಿಗೆ ಹೆಜ್ಜೆ ಹೆಜ್ಜೆಗೂ ಅನುಗ್ರಹಿಸುವನು ಮತ್ತು ಅವನ ಮಾರ್ಗದಲ್ಲಿ ಶ್ರಮಪಡುವರಿಗೆ ಹಾಗೂ ಕಷ್ಟ ಅನುಭವಿಸುವವರಿಗೆ ವ್ಯರ್ಥಗೊಳಿಸಲಾರನು.

**ಈ ಜಲ್ಸವನ್ನು ಸಾಮಾನ್ಯ ಮಾನವ ಜಲ್ಸಗಳಂತೆ ಯೋಚಿಸಬೇಡಿ**

ಈ ಜಲ್ಸಾವನ್ನು ಸಾಮಾನ್ಯ ಜಲ್ಸಾಗಳಂತೆ ಕಾಣಬೇಡಿರಿ. ಇಲ್ಲಿ ನಡೆಯುವಂತಹ ಎಲ್ಲಾ ಕಾರ್ಯಗಳು ದೇವ ಸಮ್ಮತಿ ಹೊಂದಿವೆ ಮತ್ತು ಇಸ್ಲಾಮಿನ ಮಹೋನ್ನತ ಸ್ಥಾನ ಪ್ರದರ್ಶಿಸುವುದಾಗಿದೆ. ಈ ಸಂಘಟನೆಯ ಬುನಾದಿಯು ಅಲ್ಲಾಹನು ಸ್ವತಃ ತನ್ನ ಕೈಯಿಂದ ಇಟ್ಟಿರುವನು. ಇದಕ್ಕಾಗಿ ಸಮುದಾಯಗಳನ್ನು ಸಿದ್ಧಗೊಳಿಸಲಾಗಿದೆ ಅವು ಅತೀ ಶೀಘ್ರದಲ್ಲಿ ಬಂದು ಸೇರುವುವು. ಏಕೆಂದರೆ ಇದು ಆ ಪ್ರತಾಪವಂತನಾದ, ಸರ್ವಶಕ್ತನಾದ ಅಲ್ಲಾಹನ ಕಾರ್ಯವಾಗಿದೆ ಅವನ ಮುಂದೆ ಯಾವುದೂ ಅಸಾಧ್ಯವಿಲ್ಲ.

**ಜಲ್ಸದಲ್ಲಿ ಭಾಗವಹಿಸುವವರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ದುಆ**

ಅಂತಿಮವಾಗಿ, "ಈ ದೈವಿಕ ಜಲ್ಸಾಕ್ಕೆ ಪ್ರಮಾಣ ಬೆಳೆಸುವ ಪ್ರತಿಯೋರ್ವರ ಜೊತೆ ಅಲ್ಲಾಹನ ಅಭಯವಿರಲಿ ಮತ್ತು ಅವರಿಗೆ ಮಹೋನ್ನತ ಪುಣ್ಯಗಳನ್ನು ಕರುಣಿಸಲಿ, ಅವರ ಮೇಲೆ ದಯೆತೋರಲಿ ಮತ್ತು ಅವರ ಕಷ್ಟನಷ್ಟಗಳನ್ನು ಹಾಗೂ ಕಠಿಣ ಪರಿಸ್ಥಿತಿಗಳನ್ನು ಸರಳಗೊಳಿಸಲಿ. ಮತ್ತು ಅವರ ಎಲ್ಲಾ ದುಃಖಗಳನ್ನು ದೂರ ಮಾಡಲಿ, ಅವರನ್ನು ಎಲ್ಲಾ ಆತಂಕಗಳಿಂದ ರಕ್ಷಿಸುವಂತಾಗಲಿ ಮತ್ತು ಅವರ ಎಲ್ಲಾ ಆಸೆ ಆಕಾಂಕ್ಷೆಗಳ ಮಾರ್ಗ ತೆರೆಯುವಂತೆ ಮಾಡಲಿ ಮತ್ತು ಅಂತ್ಯ ತೀರ್ಮಾನದ ದಿನದಂದು ತನ್ನ ಅನುಗ್ರಹಿತ ದಾಸರಲ್ಲಿ ನಮ್ಮನ್ನು ಸೇರಿಸುವಂತಾಗಲಿ ಮತ್ತು ಈ ಪ್ರಯಾಣದ ಅಂತ್ಯದಲ್ಲಿ ಅವರ ಖಲೀಫರ ಅಭಯ ಅವರ ಮೇಲಿರಲಿ. ಓ ಅಲ್ಲಾಹನೇ ಓ ಸರ್ವಶಕ್ತ ಕಾರುಣ್ಯನಿಧಿಯೇ ಪರಮ ದಯವಂತನೇ, ವಿಘ್ನ ನಿವಾರಕನೇ, ನಮ್ಮ ಈ ಎಲ್ಲ ಪ್ರಾರ್ಥನೆಗಳನ್ನು ಸ್ವೀಕರಿಸು ಮತ್ತು ನಮಗೆ ನಮ್ಮ ಎಲ್ಲ ಶತ್ರಗಳ ಮೇಲೆ ವಿಜಯಿಯನ್ನಾಗಿ ಮಾಡು. ಎಲ್ಲಾ ರೀತಿಯ ಬಲ ಮತ್ತು ಶಕ್ತಿ ನಿನಗಿದೆ. ಆಮೀನ್ ಸುಮ್ಮ ಆಮೀನ್. (ಮಜ್‌ಮೂಅ ಇಶ್ತಿಹಾರಾತ್, ಸಂಪುಟ–1, ಇಶ್ತಿಹಾರ್–91, ಪುಟ–360, ಪ್ರಕಟಿತ ಖಾದಿಯಾನ್ 2019)

**(ಮನ್ಸೂರ್ ಅಹ್ಮದ್ ಮಸ್ರೂರ್)**

## ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗಳಲ್ಲದೆ ಹುಝೂರ್ ಅನ್ವರ್[ಅತಬಿಅ]ರವರ ಹೊಸ ಖುತ್‌ಬ ಜುಮುಆ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಆ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

## ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ. **(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

## ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ಸಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

## *127 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 127ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 23, 24 ಮತ್ತು 25ನೇ ಡಿಸೆಂಬರ್ 2022 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ.

**ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## ಹಝ್ರತ್ ಮುಹಮ್ಮದ್ ಪೈಗಂಬರ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ:**

"ಎಲ್ಲ ಪ್ರವಾದಿಗಳಲ್ಲಿ ಅತ್ಯಂತ ಪರಿಪೂರ್ಣ ಉಪದೇಶಗಳನ್ನು ನೀಡಿದವರು, ಅತ್ಯುನ್ನತ ಮಟ್ಟದ ಪರಿಶುದ್ಧತೆ ಹಾಗು ಜಾಣ್ಮೆಯಿಂದ ಕೂಡಿದ ಉಪದೇಶ ನೀಡಿದವರು ಮತ್ತು ಅತ್ಯುತ್ತಮ ಮಾನವೀಯ ಗುಣಗಳನ್ನು ತನ್ನ ಜೀವಿತದಲ್ಲಿ ಅಳವಡಿಸಿ ಲೋಕಕ್ಕೆ ಅತ್ಯುತ್ತಮ ಮಾದರಿಯಾಗಿ ತೋರಿಸಿಕೊಟ್ಟವರು ನಮ್ಮ ನಾಯಕರೂ ನಮ್ಮ ಮಾಲಿಕರೂ ಆದ ಹಝ್ರತ್ ಮುಹಮ್ಮದ್[ಸ] ಆಗಿರುವರು ಎಂದು ನನಗೆ ಮನವರಿಕೆ ಮಾಡಿಕೊಡಲಾಗಿದೆ." ***(ಅರ್‌ಬಈನ್ ಸಂಪುಟ–1 ರೂಹಾನಿ ಖಝಾಇನ್ ಸಂಪುಟ 17, ಪುಟ 345)***

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.03, Thursday, 24 November 2022, Issue No. 47

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.600/- (Per Issue: 10/- ) (WEIGHT: 20-50, grms / issue)

# ಇಸ್ಲಾಂ ಮತ್ತು ಸೈಯ್ಯದ್‌ನಾ ಹಝ್ರತ್ ಮಸಿಹ್ ಮೌಊದ್ ಅಲೈಹಿಸ್ಸಲಾಮ್‌ರವರ ಕಟು ವಿರೋಧಿಯಾದ ಅಲೆಕ್ಸಾಂಡರ್ ಡೂಯಿಯ ಝಿಯಾನ್ ನಗರದಿಂದ ಪ್ರಾರಂಭವಾದ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಅಸಾಧಾರಣ ಅನುಗ್ರಹದಾಯಕ ಅಮೇರಿಕದ ಐತಿಹಾಸಿಕ ಪ್ರವಾಸ ಸೆಪ್ಟೆಂಬರ್, ಅಕ್ಟೋಬರ್ 2022

(ಬದರ್ ಸಂಚಿಕೆ 46ರ ಉಳಿದ ಭಾಗ)

## ಅಹ್ಮದೀಯ ಜಮಾಅತ್ ಅಮೇರಿಕಾದ ಸಂಕ್ಷಿಪ್ತ ಇತಿಹಾಸ

ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಮೇರಿಕಾದ ಇತಿಹಾಸದಲ್ಲಿ 1920ರ ವರ್ಷವು ಬಹಳ ಮಹತ್ವವನ್ನು ಹೊಂದಿದೆ. ಅಂದು ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ರವರ ಸಲಹೆ ಮೇರೆಗೆ ಲಂಡನ್‌ನಿಂದ ಹಝ್ರತ್ ಡಾ. ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್‌ರವರು ಅಮೇರಿಕದ ಮೊದಲ ಪ್ರಚಾರಕರಾಗಿ ಜನವರಿ 26, 1920 ರಂದು ಲಿವರ್‌ಪೂಲ್ ಬಂದರ್ ಮುಖಾಂತರ 21 ದಿನಗಳ ಪ್ರವಾಸದ ನಂತರ 15 ಫೆಬ್ರವರಿ 1920ರಂದು ಯುನೈಟೆಡ್ ಸ್ಟೇಟ್ಸ್‌ನ ಫಿಲಡೆಲ್ಫಿಯಾ ಬಂದರಿಗೆ ಬಂದಿಳಿದಿದ್ದರು. ಆದರೆ ಅವರನ್ನು ಈ ದೇಶಕ್ಕೆ ಪ್ರವೇಶಿಸದಂತೆ ತಡೆಯಲಾಯಿತು. ಮತ್ತು ಅವರನ್ನು ಬಂದ ಹಡಗಿನಲ್ಲೆ ಹಿಂತಿರುಗಿ ಕಳುಹಿಸಲು ನಿರ್ಧರಿಸಲಾಯಿತು. ಈ ನಿರ್ಧಾರದ ವಿರುದ್ಧ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್ ಅವರು ವಾಷಿಂಗ್ಟನ್‌ನ ವಸಾಹತು ಇಲಾಖೆಗೆ ಮನವಿ ಮಾಡಿದರು. ತದನಂತರ ಅವರನ್ನು ಸಮುದ್ರ ತೀರದ ಮನೆಯೊಂದರಲ್ಲಿ ಬಂಧಿಸಿ ಸೆರೆಮನೆಗೆ ಹಾಕಲಾಯಿತು. ಈ ಮನೆಯಿಂದ ಹೊರಬರುವುದನ್ನು ನಿಷೇಧಿಸಲಾಗಿತ್ತು. ಆದರೆ ಅವರು ಛಾವಣಿಯ ಮೇಲೆ ನಡೆಯಬಹುದಾಗಿತ್ತು, ಅದರ ಬಾಗಿಲು ದಿನಕ್ಕೆ ಎರಡು ಬಾರಿ ಮಾತ್ರ ತೆರೆಯಲಾಗುತ್ತಿತ್ತು.

ಈ ಮನೆಯಲ್ಲಿ ಕೆಲವು ಯುರೋಪಿಯನ್ನರನ್ನು ಸಹ ಬಂಧಿಸಲಾಗಿತ್ತು. ಹಝ್ರತ್ ಮುಫ್ತಿ ಸಾಹಿಬ್ ಅವರು ಅವಕಾಶವನ್ನು ಬಳಸಿಕೊಂಡರು ಮತ್ತು ತಮ್ಮ ಸಹ ಕೈದಿಗಳಿಗೆ ಬೋಧಿಸಲು ಪ್ರಾರಂಭಿಸಿದರು, ಇದರ ಪರಿಣಾಮವಾಗಿ ಹದಿನೈದು ಕೈದಿಗಳು ಎರಡು ತಿಂಗಳೊಳಗೆ ಇಸ್ಲಾಂ ಧರ್ಮವನ್ನು ಸ್ವೀಕರಿಸಿದರು.

ಅಮೇರಿಕದ ನೆಲದಲ್ಲಿ ಬೈಅತ್ ಮಾಡಿದ ಮೊದಲ ಅಹ್ಮದಿಯ ಹೆಸರು Mr. R.I.ರೋಚ್‌ಫೋರ್ಡ್ ಆಗಿತ್ತು. ಇವರಲ್ಲದೆ ಜಮೈಕಾ, ಬ್ರಿಟಿಷ್ ಗಯಾನಾ, ಪೋಲೆಂಡ್, ರಷ್ಯಾ, ಜರ್ಮನಿ, ಅಜೋರ್ಸ್, ಬೆಲ್ಜಿಯಂ, ಪೋರ್ಚುಗಲ್, ಇಟಲಿ ಮತ್ತು ಫ್ರಾನ್ಸ್‌ನಿಂದ ಸಂಬಂಧ ಹೊಂದಿರುವವರು ಸಹ ಬೈಅತ್ ಮಾಡಿದರು.

ಹಝ್ರತ್ ಖಲೀಫತುಲ್ ಮಸೀಹ್ ಸಾನಿ(ರ) ಅವರಿಗೆ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್(ರ) ಅವರನ್ನು ಯುನೈಟೆಡ್ ಸ್ಟೇಟ್ಸ್‌ನಲ್ಲಿ ಬಂಧಿಸಲಾಗಿದೆ ಎಂಬ ಮಾಹಿತಿಯನ್ನು ಸಿಕ್ಕಿದಾಗ, ಅವರು ಅಮೇರಿಕನ್ ಸರ್ಕಾರದ ಧೋರಣೆಗೆ ವಿಷಾದಿಸಿ ಹೇಳಿದರು: "ತಾನು ಶಕ್ತಿಶಾಲಿಯಾಗಿದ್ದೇನೆ ಎಂದು ಹೇಳಿಕೊಳ್ಳುವ ಅಮೇರಿಕಾವು, ಈ ಹೊತ್ತಿಗೆ ಭೌತಿಕ ಸಾಮ್ರಾಜ್ಯಗಳೊಂದಿಗೆ ಹೋರಾಡಿ ಸೋಲಿಸಿದ್ದೇವೆ ಎಂದು ಅವರು ಹೇಳಿಕೊಳ್ಳುತ್ತಾರೆ. ಆದರೆ ಅವರು ಆಧ್ಯಾತ್ಮಿಕ ಸಾಮ್ರಾಜ್ಯದೊಂದಿಗೆ ಸ್ಪರ್ಧಿಸಲಿಲ್ಲ. ಈಗ ಅವನರು ನಮ್ಮೊಂದಿಗೆ ಸ್ಪರ್ಧಿಸಿದರೆ, ಅಲ್ಲಾಹನು ನಮ್ಮೊಂದಿಗಿರುವುದರಿಂದ ಅವರು ಎಂದಿಗೂ ನಮ್ಮನ್ನು ಸೋಲಿಸಲು ಸಾಧ್ಯವಿಲ್ಲ ಎಂದು ಅವರು ಅರಿತುಕೊಳ್ಳುತ್ತಾರೆ. ಅಮೇರಿಕದ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಉಪದೇಶ ಮಾಡಿ ಅಲ್ಲಿನ ಜನರನ್ನು ಮುಸಲ್ಮಾನರನ್ನಾಗಿ ಮಾಡಿ ಅಮೆರಿಕಕ್ಕೆ ಕಳುಹಿಸುತ್ತೇವೆ ಅವರನ್ನು ತಡೆಯಲು ಅಮೆರಿಕಕ್ಕೆ ಸಾಧ್ಯವಿಲ್ಲ. ಮತ್ತು ಒಂದು ದಿನ ಅಮೆರಿಕಾದಲ್ಲಿ **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** ನ ಧ್ವನಿ ಪ್ರತಿಧ್ವನಿಸುತ್ತದೆ ಮತ್ತು ಖಂಡಿತವಾಗಿಯೂ ಪ್ರತಿಧ್ವನಿಸುತ್ತದೆ" ಎಂದು ನಾವು ಭಾವಿಸುತ್ತೇವೆ.

ಮೇ 1920 ರಲ್ಲಿ, ಹಝ್ರತ್ ಮುಫ್ತಿ ಸಾಹಿಬ್ ಅವರ ಮೇಲಿನ ನಿಷೇಧವನ್ನು ಅಮೇರಿಕನ್ ಸರ್ಕಾರವು ತೆಗೆದುಹಾಕಿತು, ತಕ್ಷಣದ ಕಾರಣವೆಂದರೆ ಅವರು ಎಲ್ಲಾ ಬಂಧಿತ ಕೈದಿಗಳನ್ನು ಮುಸ್ಲಿಮರನ್ನಾಗಿ ಪರಿವರ್ತಿಸಬಾರದು ಎಂದಾಗಿತ್ತು. ಹೀಗೆ ಅವರಿಗೆ ಯುನೈಟೆಡ್ ಸ್ಟೇಟ್ಸ್ ಪ್ರವೇಶ ನೀಡಲು ಅಧಿಕಾರಿಗಳು ನಿರ್ಧರಿಸಿದ್ದರು. ಹಝ್ರತ್ ಮುಫ್ತಿ ಸಾಹೇಬರು ನ್ಯೂಯಾರ್ಕ್‌ನಲ್ಲಿ ಮನೆಯೊಂದನ್ನು ಬಾಡಿಗೆಗೆ ತೆಗೆದುಕೊಳ್ಳುವ ಮೂಲಕ ಜಮಾಅತ್‌ನ ಕಾರ್ಯಾಚರಣೆಯನ್ನು ಪ್ರಾರಂಭಿಸಿದರು. ನಂತರ 1921 ರಲ್ಲಿ, ಅವರು ಶಿಕಾಗೋಗೆ ತೆರಳಿದರು ಮತ್ತು ಸಾಮಾನ್ಯ ಕಟ್ಟಡವನ್ನು ಖರೀದಿಸುವ ಮೂಲಕ ಜಮಾಅತ್‌ನ ಕೇಂದ್ರವನ್ನು ಸ್ಥಾಪಿಸಿದರು. ಈ ಮನೆಯನ್ನು ಮಿಷನ್ ಹೌಸ್, ನಿವಾಸ ಮತ್ತು ಮಸೀದಿಯಾಗಿ ಬಳಸಲಾಗುತ್ತಿತ್ತು. ಜುಲೈ 1921 ರಲ್ಲಿ, ಅವರು ಅದೇ ಮಿಷನ್ ಹೌಸ್‌ನಿಂದ ಜಮಾಅತ್ ಅಮೆರಿಕದ ಮೊದಲ ಮ್ಯಾಗಝೀನ್ ಮುಸ್ಲಿಂ ಸನ್‌ರೈಸ್ ಅನ್ನು ಪ್ರಕಟಿಸಿದರು. ಈ ಪತ್ರಿಕೆ ಇಂದಿಗೂ ನಿಯಮಿತವಾಗಿ ಪ್ರಕಟವಾಗುತ್ತಿದೆ.

ಇಂದು, ಸರ್ವಶಕ್ತನಾದ ಅಲ್ಲಾಹನ ಕೃಪೆಯಿಂದ, ಅಹ್ಮದಿಯಾ ಜಮಾಅತ್ ಅಮೆರಿಕದ ಎಲ್ಲಾ ಪ್ರಮುಖ ನಗರಗಳಲ್ಲಿ ಮತ್ತು ಪ್ರತಿ ರಾಜ್ಯಗಳಲ್ಲಿ ಸ್ಥಾಪಿಸಲ್ಪಟ್ಟಿವೆ. ಅಮೆರಿಕಾದಲ್ಲಿ, 58 ಸ್ಥಳಗಳಲ್ಲಿ ಸಕ್ರಿಯ ಮತ್ತು ಶ್ರದ್ಧೆಯ ಜಮಾಅತ್‌ಗಳನ್ನು ಸ್ಥಾಪಿಸಲಾಗಿದೆ. 56 ಮಸೀದಿಗಳು ಮತ್ತು 60 ಮಿಷನ್ ಹೌಸ್‌ಗಳಿವೆ. ಕೆಲವು ಸ್ಥಳಗಳಲ್ಲಿ, ದೊಡ್ಡ ಮತ್ತು ವಿಶಾಲವಾದ ಕಟ್ಟಡಗಳು ಮತ್ತು ಮಸೀದಿಗಳನ್ನು ನಿರ್ಮಿಸಲಾಗಿದೆ. ಹೊಸ ಮಸೀದಿಗಳು ಮತ್ತು ಮಿಷನ್ ಹೌಸ್‌ಗಳ ನಿರ್ಮಾಣ ಮುಂದುವರೆದಿದೆ.

ಇದೇ ಅಮೆರಿಕದಲ್ಲಿ 1920ರಲ್ಲಿ ಅಹ್ಮದೀಯ ಜಮಾಅತ್‌ನ ಮೊದಲ ಬೋಧಕ ಹಝ್ರತ್ ಅಖ್‌ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಸಹಚರರಾದ ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಕ್ ಸಾಹಿಬ್, ಅವರಿಗೆ ತಮ್ಮ ದೇಶಕ್ಕೆ ಪ್ರವೇಶಿಸದಂತೆ ತಡೆಯಲಾಯಿತು ಮತ್ತು ಅವರನ್ನು ಜೈಲಿಗೆ ಹಾಕಲಾಯಿತು. ಆ ಸಮಯದಲ್ಲಿ ಹಝ್ರತ್ ಮುಸ್ಲೆಹ್ ಮೌಊದ್(ರ) ಅವರು "ಅಮೆರಿಕವು ನಮ್ಮನ್ನು ಎಂದಿಗೂ ಸೋಲಿಸಲು ಸಾಧ್ಯವಿಲ್ಲ. ಒಂದು ದಿನ **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** ನ ಧ್ವನಿಯು ಅಮೆರಿಕಾದಲ್ಲಿ ಕೇಳುತ್ತದೆ ಮತ್ತು ಅದು ಖಂಡಿತವಾಗಿಯೂ ಕೇಳುತ್ತದೆ" ಎಂದು ಹೇಳಿದರು.

ಇಂದು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಇಡೀ ಅಮೇರಿಕಾದಲ್ಲಿ ಅಹಮದೀಯರು ವಾಸಿಸುತ್ತಿದ್ದಾರೆ. ಹೀಗೆ **ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ರಸೂಲುಲ್ಲಾಹ್** "ಅಲ್ಲಾಹನ ಹೊರತು ಆರಾಧನೆಗೆ ಬೇರೆ ಯಾರೂ ಅರ್ಹರಲ್ಲ, ಪ್ರವಾದಿ ಮುಹಮ್ಮದ್(ಸ)ರವರು ಅಲ್ಲಾಹನ ಸಂದೇಶವಾಹಕರೂ ಆಗಿದ್ದಾರೆ. ಎಂಬ ಧ್ವನಿ ಅಮೆರಿಕದ ಪ್ರತಿಯೊಂದು ಭಾಗದಲ್ಲೂ ಹಗಲಿರುಳು ಪ್ರತಿಧ್ವನಿಸುತ್ತಿದೆ.

2020 ರಲ್ಲಿ, ಅಹ್ಮದೀಯ ಜಮಾಅತ್ ಅಮೇರಿಕಾ ಸ್ಥಾಪನೆಯಾಗಿ 100 ವರ್ಷಗಳು ಪೂರ್ಣಗೊಂಡಿವೆ ಮತ್ತು ಜಮಾಅತ್ ಅಮೇರಿಕಾ ತನ್ನ ಶತಮಾನೋತ್ಸವವನ್ನು ಆಚರಿಸುತ್ತಿದೆ ಮತ್ತು ಜಮಾಅತ್‌ನ ವಿವಿಧ ಕಾರ್ಯಕ್ರಮಗಳು ನಡೆಯುತ್ತಿವೆ.

ಜಾನ್ ಅಲೆಕ್ಸಾಂಡರ್ ಡೋಇ ಅವರ ಝಿಯಾನ್ ನಗರದಲ್ಲಿ ಮಸ್ಜಿದ್ ಫತ್ಹೆ ಅಝೀಮ್‌ನ ನಿರ್ಮಾಣವು ಅಮೇರಿಕಾದ ಶತಮಾನೋತ್ಸವ ಜುಬಿಲಿ ಆಚರಣೆಯ ಒಂದು ಪ್ರಮುಖ ಕಾರ್ಯಕ್ರಮವಾಗಿದೆ. ಈ ಪ್ರವಾಸದಲ್ಲಿ ಇನ್ಶಾ ಅಲ್ಲಾಹ್ ಈ ಮಸೀದಿಯು ಉದ್ಘಾಟನೆಗೊಳ್ಳಲಿದ್ದು, ಅಲ್ಲಿ ಅದರ ಸಂಪೂರ್ಣ ವಿವರಗಳನ್ನು ದಾಖಲಿಸಲಾಗುತ್ತದೆ.

(ಮುಂದುವರಿಯುವುದು)

**Love for All, Hatred for None**
**ಪ್ರೀತಿ ಎಲ್ಲರಲ್ಲೂ, ದ್ವೇಶವಿಲ್ಲ ಯಾರಲ್ಲೂ**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800–103–2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.